

[illegible]

[illegible]

ಜೈ ವಿದ್ಯಾರ್ಥಿ

ವಿಶ್ವ–ರಾಷ್ಟ್ರ–ಸಂಸ್ಕೃತಿ
ಸ್ವದೇಶ–ಸ್ವಭಾಷೆ–ಸತ್ ಸಾಹಿತ್ಯ
ಪರಿಜ್ಞಾನಗಳ ವ್ರತದಿಂದೆ–

ಸತ್ಯ–ಶಿಸ್ತು–ಶಕ್ತಿ–ಶಾಂತಿ
ಜ್ಞಾನ–ವಿಜ್ಞಾನ–ಸುಜ್ಞಾನ
ಅಭಿಜ್ಞಾನಗಳ ಪ್ರೇಮದಿಂದೆ–

ವಿಶ್ವಶಾಂತಿಯ–ವಿಶ್ವಪಂಥದಿ
ವಿಶ್ವಪಾತ್ರಿ–ವಿಶ್ವವೀಥಿ ಮೆಟ್ಟಿ
ವಿಶ್ವಜೀವನೀ ಪಾತ್ರವಾಗೆ–

ಅಂತೇವಾಸಿಗಳ ಸರ್ವೋದ್ಧಾರ!
ಸಂಜೀವನಾ ಪರಮಪಾವನಾ
ಜೈ ವಿದ್ಯಾರ್ಥಿ! ಜೈ ವಿದ್ಯಾಧನ!

ಕೌಶಿಕನ ಗೊಂಬೆ

(ಶಿಶು ಸಾಹಿತ್ಯ)

•

ಮಲ್ಲಿಕಾ

ಸುಖದುಃಖಗಳಿರ್ಪುದು
ನಿನ್ನಂತರಂಗದಲಿ.
ನೀನಾವುದಂ ಬಯಸುವೆಯೊ
ಬಪ್ಪುದದು ಮನತುಂಬಿ.

Kowshikana Gombe in Kannada by 'Mallika'
Published by Lakshmi Prakashana,
7, Langford Road, Bangalore-560 025.

ಪ್ರಥಮ ಮುದ್ರಣ : ೧೯೮೭

ಬೆಲೆ: ಆರು ರೂಪಾಯಿಗಳು

ಮುದ್ರಕರು :
ನ್ಯೂ ಐಡಿಯಾಸ್
30, 15ನೇ ಅಡ್ಡರಸ್ತೆ
ಮೂರನೆಯ ವಿಭಾಗ ಜಯನಗರ
ಬೆಂಗಳೂರು-560 011

ಕೌಶಿಕನ ಗೊಂಬೆ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು—560 025

ಪರಿವಿಡಿ

ನಿವೇದನೆ

ಪ್ರಿಯ ನಲ್ಮಕ್ಕಳೇ,

ನಿಮ್ಮ ಮನೋರಂಜನೆಗಾಗಿ ಈ ಪ್ರಾಣಿ ಪಕ್ಷಿಗಳ ಪುಟ್ಟ ಪುಟ್ಟ ಕಥೆಗಳನ್ನು ಬರೆಯುತ್ತಿರುವೆ. ಇವನ್ನು ಓದಿ ಮನನ ಮಾಡುವುದರಿಂದ ನಿಮ್ಮ ಮನಸ್ಸು ಸಂತಸಗೊಂಡರೆ ಅಷ್ಟೇ ಸಾಕು. ನಿಮಗಾಗಿ ಈಗಾಗಲೇ ನಾಲ್ಕೈದು ಪುಸ್ತಕ ಬರೆದಿರುವೆ. ಇನ್ನು ಮುಂದೆಯೂ ಪ್ರಕಟಿಸುವ ಇಚ್ಛೆಗೆ ಶ್ರೀ ಭಗವಂತನ ದಯೆ ಇರಬೇಕು.

ಇಂತು

ಮಲ್ಲಿಕಾ

ಶಾಸ್ಕಾ

ಬೆಟ್ಟದ ಬಂಡೆಗಳ ರಾಶಿಯಲ್ಲಿ ಒಂದು ಗವಿ.

ಅದರ ಒಳಕೊಠಡಿಯಲ್ಲಿ ತುಪ್ಪಳದ ಮೆತ್ತನೆಯ ಹಾಸು. ಅದರ ಮೇಲೆ ಹಾಯಾಗಿ ನಿದ್ದೆ ಹೋಗಿದ್ದಾಳೆ. ಪುಟ್ಟಿ ಶಾಸ್ಕಾ. ತಾಯಿ ಕರಡಿಯ ಹೆಸರು ಮಾಸ್ಕ. ಅವಳಿಗೆ ಕೈತುಂಬ ಕೆಲಸ ಅಡಿಗೆ ಮನೆಯಲ್ಲಿ. ಒಮ್ಮೆ ಮಗಳನ್ನು ಎಬ್ಬಿಸಿ ಹೋಗಿದ್ದಳು. ಶಾಸ್ಕಾ ದಿನವೂ ಹಾಗೆಯೇ. ಹೊತ್ತಿಗೆ ಮುಂಚೆ ಏಳುವುದೆಂದರೆ ಕಷ್ಟ. ಸೂರ್ಯ ಮೇಲೇರಿದ ಮೇಲೆಯೇ ಅವಳ ದಿನಚರಿ. ತಾಯಿ ಮತ್ತೊಮ್ಮೆ ಎಳಿಸಿದಳು. ಕಣ್ತೆರೆದು ನೋಡಿದರೆ ಸೂರ್ಯ ಕಿರಣಗಳು ಕಣ್ಣಿಗೆ ಚುಚ್ಚಿದುವು. ಶಾಸ್ಕಾ ಎದ್ದು ಮುಖ ಮಜ್ಜನ ಮಾಡಿ ಒಳಬರುವಷ್ಟರಲ್ಲಿ ಬ್ರೆಡ್ಡು ಬೆಣ್ಣೆ ಅಣಿಯಾಗಿತ್ತು. ತಾಯಿ ತಿಂಡಿಕೊಟ್ಟು ಮೈಯನ್ನು ಬಾಚಣಿಗೆಯಿಂದ ಬಾಚಿ ಬ್ರೆಷ್ ಮಾಡುತ್ತ ಹೇಳಿದಳು "ಶಾಲೆಗೆ ಹೊತ್ತಾಯ್ತು. ನಿನ್ನ ಮಿಸ್ ಸಿಟ್ಟಾಗುತ್ತಾಳೆ. ಇತರ ಮರಿಗಳ ಮುಂದೆ ನಿನಗೆ ಅವಮಾನವಾದೀತು."

"ಓ ! ಅದೆಲ್ಲಾ ಇಲ್ಲ. ನನ್ನ ಕಂಡರೆ ಎಲ್ಲರಿಗೂ ತುಂಬಾ ಇಷ್ಟ. ನನ್ನ ಬಿಳಿಯ ಬಣ್ಣ ಎಷ್ಟು ಮೆಚ್ಚಿಕೊಳ್ಳು ತ್ತಾರೆ ಗೊತ್ತೆ ?"

"ಇನ್ನಾರೂ ಬಿಳಿಯರಿಲ್ಲವೇ ನಿನ್ನ ಶಾಲೆಯಲ್ಲಿ ?"

ಶಾಸ್ಕಾ ತಲೆಯಾಡಿಸುತ್ತ ಹೇಳಿತು "ಇಲ್ಲ...ಎಲ್ಲಾ ಕಪ್ಪು ಕಪ್ಪು. ಮಿಸ್ ಕೂಡಾ ಕಪ್ಪು ! ಅದಕ್ಕೇ ನನ್ನ ಕಂಡರೆ ಎಲ್ಲರಿಗೂ ಬಲು ಪ್ರೀತಿ!"

"ಒಳ್ಳೆಯದು. ಬೇಗ ಹೊರಡು."

ಶಾಸ್ಕಾ ಪುಸ್ತಕಗಳ ಸಹಿತ ಶಾಲೆಯ ಹಾದಿ ಹಿಡಿದಳು. ಮಾಸ್ಕ ಮಗಳನ್ನು ಸಂತಸದಿಂದ ಕಳುಹಿಸಿದಳು.

ಪುಟ್ಟ ಶಾಸ್ಕಾ ಟಪ್ ಟಪ್ ಎಂದು ಹೆಜ್ಜೆ ಇಡುತ್ತ ಶಾಲೆಯನ್ನು ತಲುಪಿತು. ಆಗಲೇ ಅನೇಕ ಕರಡಿ ಮರಿಗಳು ಬಂದಿದ್ದುವು. ಅವೆಲ್ಲಾ ಕಪ್ಪು ಮರಿಗಳೇ. ಅವಕ್ಕೆ ಶಾಸ್ಕಾಳನ್ನು ನೋಡಿದರೆ ನಮಗೂ ಅಂತಹ ಬಿಳಿಯ ಬಣ್ಣ ಇದ್ದಿದ್ದರೆ ? ಎಂಬ ಆಸೆ. ಅಂತಲೇ, ಅವೆಲ್ಲಾ ಶಾಸ್ಕಾಳ ಸುತ್ತಮುತ್ತ ಕೂಡಿ ಕೇಳಿದುವು "ನೀನು ಹೇಗೆ ಬೆಳ್ಳಗಾದೆ ? ಇದರ ಒಳಗುಟ್ಟೇನು ? ನಾವೂ ನಿನ್ನಂತೆಯೇ ಬೆಳ್ಳಗಾಗುವ ಆಸೆಯಿದೆ. ಏನು ಮಾಡಿದರೆ ನಾವು ಬೆಳ್ಳಗಾಗುತ್ತೇವೆ ?"

"ಅಯ್ಯೊ, ಇದೇನು ವಿಶೇಷ ಎಂದು ಕೇಳುತಿದ್ದೀರಿ?"

"ವಿಶೇಷವೇ ! ನಾವೂ ಕೂಡ ಬೆಳ್ಳಗಾಗಬೇಕು."

"ಹಿಂದಿನ ಬೀದಿಯಲ್ಲಿ ಬೆಣ್ಣೆಯಂತಹ ಬಿಳಿಯ ಸೋಪು ಸಿಗುತ್ತದೆ. ಅದರಿಂದ ಸ್ನಾನಮಾಡಿದರೆ ಬೆಳ್ಳಗಾಗು ತ್ತೀರಿ. ನಾನು ಸ್ನಾನ ಮಾಡುವುದು ಬಿಳೀ ಸೋಪಿನಲ್ಲಿ."

"ಓ, ಬೆಣ್ಣೆಯಂತಹ ಸೋಪು ! ಎಷ್ಟು ಚೆನ್ನ !"

ಎಲ್ಲಾ ಮರಿಗಳೂ ಮುರುಮುರುಗುಟ್ಟಿ ಕುಣಿಕುಣಿ ದಾಡಿದುವು. ಅವುಗಳ ಸಂತೋಷದಲ್ಲಿ ತಾನೂ ಪಾಲ್ಗೊಂ ಡಳು ಶಾಸ್ಕಾ.

ಶಾಲೆ ಮುಗಿದ ನಂತರ ಕಪ್ಪು ಕರಡಿ ಮರಿಗಳು ಹಿಂದಿನ ಬೀದಿಯತ್ತ ಓಡಿದುವು. ಆ ಬೀದಿಯಲ್ಲಿ ಸಾಲು ದ್ದಕ್ಕೂ ಅಂಗಡಿಗಳೇ. ಯಾವ ಅಂಗಡಿಯಲ್ಲಿ ಬೆಣ್ಣೆಯಂತಹ ಸೋಪು ಇದೆಯೋ ಎಂದು ಹಣಿಕಿ ನೋಡುತ್ತಲೇ ಮುಂದೆ ನಡೆದುವು. ಮುಂದಿನ ಅಂಗಡಿಯಲ್ಲಿ ಸೋಪಿನ ರಾಶಿ ಕಂಡು ಬಂತು. ಆದರಲ್ಲಿ ಯಾವುದು ಬೆಣ್ಣೆಯಂತಹ ಸೋಪು ಎಂಬುದು ತಿಳಿಯದೆ ಒಂದರ ಮುಖ ಒಂದು ನೋಡಿ ಕೊಂಡುವು.

ಮಿಟ್ಟಿ ಅಂಗಡಿಯುವನನ್ನು ಕೇಳಿತು "ರೀ ! ಬಿಳೀ ಸೋಪು ಇದೆಯೇ ?"

"ಸೋಪಿನ ಹೆಸರೇನು ?"

"ಬೆಣ್ಣೆಯಂತಹ ಬಿಳೀ ಸೋಪು. ಮೈಗೆ ಹಚ್ಚಿ ಸ್ನಾನ ಮಾಡಿದರೆ ಬೆಳ್ಳಗಾಗುವುದಿಲ್ಲವೇ ಆ ಸೋಪು !"

ಅಂಗಡಿಯುವ ಖೊಳ್ಳನೆ ನಕ್ಕು ಬಿಟ್ಟ.

ಕರಡಿ ಮರಿಗೆ ಅವಮಾನವಾದರೂ ಜಗ್ಗದೇ ಕೇಳಿತು "ನಿನಗೊತ್ತಿಲ್ಲವೇ ಬಿಳೀ ಸೋಪು ?"

ಅವನು ಎರಡು ಬಿಳೀ ಸೋಪನ್ನು ತೆಗೆದು ಕೊಟ್ಟು ಹೇಳಿದ "ಒಂದೊಂದಕ್ಕೂ ಮೂರು ರೂಪಾಯಿ. ಯಾವುದು ಬೇಕೋ ತೆಗೆದುಕೊ."

ಒಡನೆ ಎಲ್ಲಾ ಮರಿಗಳೂ ಸುತ್ತುವರಿದು ಮುಟ್ಟಿ ಮುಟ್ಟಿ ನೋಡಿದುವು. ಆದರ ನುಣುಪು ಮತ್ತು ಬಿಳೀ ಬಣ್ಣ ಎಲ್ಲರ ಮನಸ್ಸಿಗೂ ಒಪ್ಪಿಗೆಯಾಯಿತು. ಮೂಸಿದರೆ ಸುವಾಸನೆ ಘಮ ಘಮ.

"ಓ ! ಇದೇ ಸರಿ. ಇಂತಹ ಸೋಪಿನಿಂದಲೇ ಶಾಸ್ತ್ರಿ ಸ್ನಾನ ಮಾಡಿರಬೇಕು! ನಾವು ಇದನ್ನೇ ತೆಗೆದುಕೊಳ್ಳೋಣ." ಮಿಟ್ಟಿ ಹೇಳಿತು.

"ಹಣಕ್ಕೇನು ಮಾಡೋಣ ? ಕಣ್ಣಿಂದ ನೋಡದ ಹಣವನ್ನು ನಾವು ತರುವುದೆಲ್ಲಿಂದ ?"

ಅಂಗಡಿಯವನನ್ನು ಕೇಳಿತೊಂದು ಪುಟ್ಟ ಮರಿ "ಹಣವನ್ನು ಎಂದಾದರೂ ತಂದುಕೊಟ್ಟರಾಗದೇ ?"

ಅಂಗಡಿಕಾರ ತಲೆಯಾಡಿಸಿ "ಆಗದು, ಈಗಲೇ ಕೊಡಬೇಕು" ಎಂದ.

"ಮನೆಯಲ್ಲಿ ಕಾಸಿದ್ದರೆ ತಾನೇ? ಅಪ್ಪ ಅಮ್ಮ ಬೇಕು ಬೇಕಾದ ಹಣ್ಣು ಹಂಪಲನ್ನು ಕದ್ದು ತರುತ್ತಾರಷ್ಟೆ, ನಾವು ಮಾಡಬೇಕಾದುದೂ ಅದೇ." ಎಂದಿತು ಕರ್ಕಿ.

"ಒಂದನ್ನು ಹಿಂದಿರುಗಿಸಿ ಇನ್ನೊಂದನ್ನು ಹಾರಿಸಿ ಬಿಡೋಣ."

ಮಿಟ್ಟಿ ಒಂದು ಸೋಪನ್ನು ಹಿಂದಿರುಗಿಸಿತು. ಅದನ್ನು ತೆಗೆದಿಡಲು ಅಂಗಡಿಕಾರ ಅತ್ತ ತಿರುಗಿದಾಗ ಇನ್ನೊಂದು ಸೋಪಿನೊಡನೆ ಎಲ್ಲಾ ಮರಿಗಳೂ ದೌಡಾಯಿಸಿ ಓಡಿದುವು. ಒಡೆಯ ಇತ್ತ ನೋಡಿದರೆ ಸೋಪೂ ಇಲ್ಲ. ಕರಡಿ ಮರಿಗಳೂ ಇಲ್ಲ. "ಇರಲಿ, ನಾಳೆ ಶಾಲೆಗೆ ಹೋಗಿ ಬುದ್ಧಿ ಕಲಿಸದಿದ್ದರೆ...?" ಎಂದು ಹಲ್ಲು ಕಡಿದ.

ಕರಡಿ ಮರಿಗಳು ಹೊಳೆಯ ತೀರಕ್ಕೆ ಹೋಗಿ ಒಮ್ಮೆ ಮುಳುಗೆದ್ದು ಮೈಗೆ ಸೋಪು ತೀಡಿಕೊಂಡುವು. ಉಜ್ಜಿದಷ್ಟು ಮೈಯೆಲ್ಲಾ ಬೆಳ್ನೊರೆ. ಎಲ್ಲಾ ಮರಿಗಳೂ ಉಜ್ಜಿದ್ದೇ ಉಜ್ಜಿದ್ದು ! ನೊರೆ. ನೊರೆ. ನೊರೆ. ಮೈಯೆಲ್ಲಾ ಬಿಳಿ

ನೊರೆ. ಮತ್ತೆ ನೀರಿಗಿಳಿದು ಮೈ ತೊಳೆದರೆ ಬಿಳಿ ನೊರೆ ಯೆಲ್ಲಾ ನೀರಿನಲ್ಲಿ ಹರಿದು ಹೋಯಿತು. ಮೈ ನೋಡಿದರೆ ಮೊದಲಿನಂತೆಯೇ ಕಪ್ಪು. !

ಒಡನೆ ಕರಡಿ ಮರಿಗಳಿಗೆಲ್ಲಾ ತುಂಬಾ ನಿರಾಸೆಯಾಗಿ ಮುಖ ಮುಖ ನೋಡಿಕೊಂಡುವು.

"ಶಾಸ್ಕಾ ಎಷ್ಟು ಸುಳ್ಳು ಹೇಳಿದ್ದಾಳೆ...!"

"ಹಾಂ ! ಅವಳಿಂದು ಶಾಲೆಗೆ ಬರಲಿ. ಸರಿಯಾದ ಬುದ್ಧಿ ಕಲಿಸದಿದ್ದರೆ...?" ಹಲ್ಲು ಕಡಿಯಿತು ಕರ್ಕಿ.

"ಹಾಂ ! ಹಾಂ ! ಎಲ್ಲರೂ ಕೂಡಿ ಪರಚಿ ಹೊಡೆದು ಸೇಡು ತೀರಿಸಿಕೊಳ್ಳಬೇಕು."

ಕರಡಿ ಮರಿಗಳೆಲ್ಲಾ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದುವು ತುಂಬಾ ಅಸಮಾಧಾನದಿಂದ.

ಮರುದಿನ ಶಾಲೆಯ ಆವರಣದಲ್ಲಿ ಎಲ್ಲಾ ಕರಡಿ ಮರಿಗಳೂ ಆಗಲೇ ಬಂದು ಸೇರಿವೆ. ಗುರುಗುರು... ಬುಸು ಬುಸು ದನಿಗಳನ್ನು ಹರಿಸಿ ಚೆಲ್ಲಾಟ-ಚಕ್ಕಂದ-ಚೆನ್ನಾಟ ಆಡ ತೊಡಗಿದುವು. ಬಿಳೀ ಶಾಸ್ಕಾ ಇನ್ನೂ ಬಂದೇ ಇಲ್ಲ. ಎಲ್ಲರ ಕಣ್ಣೂ ದಾರಿಯ ಕಡೆಗೆ.

ಸ್ವಲ್ಪಹೊತ್ತು ಉರುಳಿತು. ಶಾಲೆಯ ಸಮಯಕ್ಕೆ ಸರಿಯಾಗಿ ಶಾಸ್ಕಾ ಆಗಮಿಸಿದಳು ಪುಸ್ತಕಗಳ ಸಹಿತ. ಬಿಳಿಯ ಮೈ, ಕರಿಯ ಕಣ್ಣುಗಳ ಚೆಲುವೆಯನ್ನು ನೋಡಿ ದರೆ ಕಪ್ಪು ಮರಿಗಳಿಗೆಲ್ಲಾ ಹೊಟ್ಟೆ ಉರಿ.

ಒಮ್ಮೆಗೇ ಅವಳ ಸುತ್ತುವರಿದು ಎಲ್ಲವೂ ಪರಚಿ ಬಾರಿಸ ತೊಡಗಿದಾಗಲೇ ಅಂಗಡಿಯಾತ ಬಂದ. ಕೈಯ್ಯ ಲ್ಲೊಂದು ಕೋಲು ! ಶಾಸ್ಕಾ ಏನೆಂದು ಅರಿಯದೆ ಕುಯ್ಯೋ

ಮರ್ರೋ ಎನ್ನುತ್ತಿದ್ದಾಗಲೇ ಅಂಗಡಿಕಾರ ಕೋಲಿನಿಂದ ಕಪ್ಪು ಮರಿಗಳಿಗೆ ಬಾರಿಸಿಯೇ ಬಾರಿಸಿದ.

ಎಲ್ಲವೂ ಕುಯ್ಯೋ ಮುಯ್ಯೋ ಎಂದು ಕೂಗುತ್ತ ಅತ್ತಿತ್ತ ಚದರಿ ಓಡಿ ಹೋದುವು.

ಶಾಸ್ಕಾಳಿಗೆ ಮಾತ್ರ ಏನೆಂಬುದು ಅರ್ಥವಾಗಲಿಲ್ಲ. ಸುಮ್ಮನೆ ಎಲ್ಲರನ್ನೂ ಪಿಳಿಪಿಳಿ ನೋಡಿದಳು.

—o—

ಚೆಸ್ಸಿಂಗ್‌ಟನ್ ಜೂ

ಮಾರಿಯಾ ತನ್ನ ಮಕ್ಕಳಾದ ಡಿಕನ್‌ಸನ್ ಮತ್ತು ರೋಸಿರವರೊಂದಿಗೆ ಚೆಸ್ಸಿಂಗ್‌ಟನ್ ಜೂಗೆ ಹೊರಟಳು.

ವಾಟರ್‌ಲೂ ಸ್ಟೇಷನ್ನಿನಿಂದ ಅರ್ಧಗಂಟೆ ರೈಲಿನ ಪಯಣ. ರೋಸಿ ತಿಂಡಿತಿನಿಸುಗಳ ಬುಟ್ಟಿ ಹಿಡಿದುಕೊಂಡಿದ್ದರೆ, ಡಿಕನ್‌ಸನ್ ಕೋಕೋ ಫ್ಲಾಸ್ಕನ್ನು ಭುಜಕ್ಕೆ ನೇತುಹಾಕಿಕೊಂಡಿದ್ದ. ಇಬ್ಬರು ಮಕ್ಕಳನ್ನೂ ಕೈಕೈ ಹಿಡಿದುಕೊಂಡು ನಡೆದಳು ಮಾರಿಯಾ. ಆ ಮಕ್ಕಳ ತಂಟೆ ತಗಾದೆ ನೋಡಿದರೆ ಎಲ್ಲಿಗೂ ಕರೆದೊಯ್ಯಬಾರದು ಎಂಬಷ್ಟು ಕಿನಿಸಿಗೆ ಮನಸ್ಸಿಗೆ. ಆದರೆ, ಅವರ ಆಸೆಯನ್ನು ಪೂರೈಸಬೇಕಲ್ಲ.

ಅಂದು ಭಾನುವಾರ. ಶಾಲೆಗೆ ಬಿಡುವು.

ಒಂಟೆ ಸವಾರಿ, ಚಿಕ್ಕ ರೈಲಿನ ಪಯಣ, ಲ್ಲಾಮಾಗಳಿಂದ ಎಳೆಯಲ್ಪಡುವ ಮಕ್ಕಳ ಗಾಡಿ ಇವುಗಳಲ್ಲಿ ಪಯಣಿಸಬೇಕೆಂಬ ಹಂಬಲ. ಮನೆಯಿಂದ ತಿಂಡಿತಿನಿಸು ತಂದಿದ್ದರೂ ಕಂಡಿದ್ದೆಲ್ಲಾ ಬೇಕು ಎಂಬ ಚಟ ಮಕ್ಕಳಿಗೆ.

ಮೊದಲು ಒಂಟೆ ಸವಾರಿ. ಇಬ್ಬರೂ ಬಿಗಿದ ಕುರ್ಚಿಯ ಮೇಲೆ ಕುಳಿತಿದ್ದರೂ ಅತ್ತಿತ್ತ ನೂಕಾಡುವುದು,

ಹಣಿಕಿ ನೋಡಲು ಮೈ ಬಾಗುವುದು ಮುಂತಾದ ಚೇಷ್ಟೆ ಗಳಲ್ಲಿ ತೊಡಗಿದ್ದರೆ ಎಲ್ಲಿ ಬೀಳುವರೋ ಎಂಬ ಭಯ ಮಾರಿಯಾಳಿಗೆ. ಅವರ ಪಕ್ಕದಲ್ಲಿಯೇ ನಡೆಯುತ್ತ "ಸರಿ ಯಾಗಿ ಕುಳಿಕುಕೊಳ್ಳಿ" ಎಂದು ಹೇಳಿಕೊಳ್ಳುತ್ತಲೇ ಸವಾರಿ ಮುಗಿಸಿ ಮಕ್ಕಳನ್ನು ಇಳಿಸಿಕೊಂಡಳು ಮಾರಿಯಾ. ಅನಂತರ ಬೋಟಿನಲ್ಲಿ ಪಯಣ.

ಆ ಸ್ವಚ್ಛ ಸುಂದರವಾದ ನೀರು ; ಅಷ್ಟೇ ಮೋಹಕ ವಾದ ದೋಣಿ. ಅಂದಮೇಲೆ ಪಯಣದ ಸೊಗಸೇ ಸೊಗಸು.

ಆದರೆ, ಮಕ್ಕಳ ಹಿಂಸೆ...ತಾಳಲಾರದ ಹಿಂಸೆ.

ಇಬ್ಬರಿಗೂ ನೀರು ಮುಟ್ಟುವ ಚಟ. ಡೆಕ್ಕಿನಮೇಲಕ್ಕೆ ಹೋಗಿ ಕೀಟಲೆ-ಗಲಾಟೆಯಲ್ಲಿ ತೊಡಗುವ ಆಸೆ. ಮಾರಿ ಯಾಗೆ ಅವರನ್ನು ಎಳೆತಂದು ಕೂಡಿಸಿ ಸಾಕಾಯಿತು. ಅವ ರಿಂದ ತನಗೂ ಪಯಣದ ಸೊಗಸಾಗಲೀ ಸಂತಸವಾಗಲೀ ಲಭಿಸಲಿಲ್ಲ.

"ಡಿಕ್ಕಿ, ನಿನಗೆ ಮನೆಯಲ್ಲೇ ಹೇಳಿದ್ದೆ ಚೇಷ್ಟೆ ಮಾಡ ಬಾರದು ಎಂದು. ನೀನು ಹೀಗೆ ಆಡುತಿದ್ದರೆ ನಾನು ಇಲ್ಲಿ ಬಿಟ್ಟು ಹೋಗುವುದೇ ಸೈ !" ಸಿಟ್ಟಿನಿಂದ ನುಡಿದಳು ಮಾರಿಯಾ. ಮುಖಬಿಂಬ ಕೆಂಪು ತಳೆದಿತ್ತು.

"ನೀನು ಬಿಟ್ಟು ಹೋದರೆ ನಾನೇ ಬರುವೆ !"

"ನಿನಗೆ ಎಂಟು ವರ್ಷ ! ನಿನ್ನ ಬುದ್ಧಿ ನಿನಗೇ ನಾಚಿಕೆ ತರುವಂತಾದ್ದು ! ಛಿ !"

"ನಾನು ಏನೂ ಮಾಡಿಲ್ಲ !"

ರೋಸಿ ಕಂಬನಿ ಸುರಿಸುತ್ತ ಹೇಳಿದಳು "ನನಗೆ ಹೇಗೆ ಗಿಂಡಿದಾನೆ ನೋಡು ?"

ಅವಳ ಎಳೆಯ ಕೈ ನಿಜವಾಗಿಯೂ ಕೆಂಪಾಗಿತ್ತು.

"ಅವಳು ನನ್ನ ನೂಕಿದ್ದೇಕೆ ?"

"ನಾನು ನೂಕಲಿಲ್ಲ ಅಮ್ಮ ! ಮೈಗೆ-ಮೈ ತಾಗಿತು ಅಷ್ಟೆ." ಬಿಕ್ಕಿದಳು ರೋಸಿ.

ತಾಯಿ ಅವಳನ್ನು ಎದೆಗೆತ್ತಿಕೊಂಡು ಮುದ್ದುಗೈದು "ಅಳಬೇಡ, ಕಂದ ! ಇಲ್ಲಿ ತುಂಬಾ ಜನರಿದ್ದಾರೆ ಎಲ್ಲರೆದುರಿಗೆ ಅಳುವುದು ನಾಚಿಕೆಗೇಡು !" ಎಂದಳು.

ಆದರೂ ಮಗುವಿನ ದುಃಖ ಆರದು.

ಮಾರಿಯಾ ಮಕ್ಕಳನ್ನು ಪೆನ್‌ಗ್ವಿನ್ ಹಕ್ಕಿಗಳನ್ನು ತೋರಿಸುವ ಸಲುವಾಗಿ ಕೊಳದಂಚಿಗೆ ಕರೆದೊಯ್ದಳು. ಡಿಕ್ಕಿ ಹಕ್ಕಿಗಳನ್ನು ಮುಟ್ಟುವ ಆತುರದಲ್ಲಿ ಮುಗ್ಗರಿಸಿ ನೀರಿಗೆ ಬಿದ್ದಾಯ್ತು ! ಆ ತಕ್ಷಣವೇ ಓಡಿಹೋಗಿ ಎತ್ತಿದ ಮಾರಿಯಾ "ಈಗೇನು ಮಾಡುತ್ತಿ ? ಮೈಯೆಲ್ಲಾ ಒದ್ದೆಯಾಯ್ತು !" ಎಂದಳು ಸಿಟ್ಟು ಬೇಸರಗಳ ಗಣಿಯಾಗಿ.

ಅದರಿಂದ ಅವನಿಗೂ ವ್ಯಸನವೇ ಆಯ್ತು. ಮೈಯೆಲ್ಲಾ ಒದ್ದೆ, ನೀರಿಳಿಯುತ್ತಿದೆ. ಆದರೆ, ರೋಸಿಗೆ ಅದು ಸಂತಸ ತರಿಸಿತು. ಅವಳು ಚಪ್ಪಾಳೆ ತಟ್ಟಿ ನಕ್ಕಳು. ಅದು ಅವನನ್ನು ಕೆರಳಿಸಿತು. ಕೂಡಲೇ ಅವಳ ಮೇಲೆ ಏರಿ ಹೋಗಿ ಏಟು ಹಾಕಿದ. ತಾಯಿ ಅಡ್ಡ ಬಂದರೂ ಏಟು ತಪ್ಪಿಸಲಾಗಲಿಲ್ಲ. ಅವಳು ಅಳುತಿದ್ದರೆ ಡಿಕ್ಕಿ ಸಿಟ್ಟು ದುಃಖಗಳಿಂದ ಪರಿತಪಿಸುತಿದ್ದಾನೆ. ಮಾರಿಯಾ ಇಬ್ಬರನ್ನೂ ಕಷ್ಟ

ದಿಂದ ಸುಧಾರಿಸಿದಳು. ಅವನ ಶರಟು ಕಳಚಿ ಹಿಂದಿ ತೊಡಿಸಿದಳು. ಚೆಡ್ಡಿಯನ್ನು ಅಲ್ಲೇ ಕಿವಿಚಿ ನೀರಿಳಿಸಿದಳು.

ರೋಸಿಗೆ ಪೆನ್‌ಗ್ವಿನ್ ಹಕ್ಕಿಗಳಿಗೆ ಕಾಳುಗಳನ್ನು ಹಾಕಲು ಕೊಟ್ಟು ದುಃಖ ಮರೆಸಿದ್ದು ವಿಶೇಷವೇ. ಆದರೂ ಸಂತಸ ಮೂಡುವ ಬದಲು ಸಾಕು ಬೇಕಾಗಿತ್ತು ಲ್ಯೂಸಿಗೆ. ಕೊಳದಂಚಿನ ಕಲ್ಲಿನಮೇಲೆ ಕುಳಿತುಕೊಂಡಳು ಮಕ್ಕಳನ್ನು ಆಡಲು ಬಿಟ್ಟು.

ಡಿಕ್ಕಿಯು ಶರಟು ಬೆಚ್ಚನೆಯ ಬಿಸಿಲಿಗೆ ಸ್ವಲ್ಪಸ್ವಲ್ಪ ವಾಗಿ ಆರಹತ್ತಿತು.

"ಅಮ್ಮಾ! ಹುಲಿಯು ಕಡೆಗೆ ಹೋಗೋಣ." ಎಂದ ಡಿಕ್ಕಿ.

"ನಿನ್ನ ಚೇಷ್ಟೆ ನೋಡಿದರೆ ಎಲ್ಲಿಗೂ ಹೋಗಬಾರದು ಎನಿಸುತ್ತೆ. ನಿಮ್ಮನ್ನು ಕರೆತಂದು ಸಾಕಾಗಿದೆ ನನಗೆ!" ಸಿಟ್ಟಿನಿಂದ ಹೇಳಿದಳು ಮಾರಿಯಾ.

"ಇಲ್ಲಮ್ಮಾ, ಎಲ್ಲರೂ ಹೋಗುತಿದ್ದಾರೆ ನಾನೂ ಹೋಗುವೆ!"

ಡಿಕ್ಕಿ ಓಡುತ್ತಲೇ ಹೊರಟ.

ಮಾರಿಯಾ ತಡೆಯಲು ನೋಡಿ ಸಾಧ್ಯವಾಗದೇ ಅವನ ಹಿಂದೆಯೇ ರೋಸಿಯೊಂದಿಗೆ ಬಿರುಸಾಗಿ ಹೆಜ್ಜೆಹಾಕಿದಳು. ಭಾನುವಾರದ ಬಿಡುವಿನಿಂದಾಗಿ ಲಂಡನ್ ನಗರಿಯ ಶ್ರೀಮಂತ ಜನಕೋಟಿ ನೆರೆದಿತ್ತು. ಜನ ಒತ್ತಡ, ಮಕ್ಕಳ ಗಲಾಟೆ, ಮಾತಿನ ಮರ್ಮರ, ನಗೆಯುಗುಲ್ಲು ಎಲ್ಲಾ ಒಗ್ಗೂಡಿ ನಗರದ ಗದ್ದಲವನ್ನೇ ನೆನಪಿಗೆ ತರುವಂತಹ ಸನ್ನಿವೇಶ.

ಆ ಜನಸಂದಣಿಯಲ್ಲಿ ಡಿಕ್ಕಿ ಎಲ್ಲಿ ನುಸುಳಿದನೋ ಕಣ್ಣಿಗೆ ಕಾಣಸಿಗಲಿಲ್ಲ. "ಡಿಕ್ಕೀ! ಡಿಕ್ಕೀ!" ಎಷ್ಟು ಕೂಗಿದರೂ ಇಲ್ಲ. ಎಲ್ಲಿ ಹುಡುಕಿದರೂ ಇಲ್ಲ. ಜನರಾಶಿಯಲ್ಲಿ ಡಿಕ್ಕಿ ಎಲ್ಲಿದ್ದಾನೋ ಕಾಣಿಸುತ್ತಲೇ ಇಲ್ಲ! ಮಾರಿಯಾ ರೋಸಿಯೊಡನೆ ಹೆಸರಿಡಿದು ಕರೆಯುತ್ತ ತಿರುಗಾಡಿದಳು. ಸುತ್ತಿಸುತ್ತಿ ಕೈಕಾಲುಗಳು ನೋಯುತ್ತಿವೆ. ಹೊತ್ತು ಇಳಿಮುಖವಾಯಿತು. ಇನ್ನು ರೈಲು ಹಿಡಿಯಬೇಕು.

ಏನು ಗತಿ? ಡಿಕ್ಕಿ ಸಿಗಲಿಲ್ಲವಲ್ಲಾ?

ಮಾರಿಯಾ ದುಃಖ-ಸಂಕಟ-ಕಳವಳಗಳಿಂದ ತತ್ತರಿಸಿದಳು. ಇಡೀ ಜೂ ಗಾರ್ಡನ್ನಿನಲ್ಲಿ ಸುತ್ತಿಸುತ್ತಿ ಬಳಲಿ ಪೋಲೀಸಿಗೆ ದೂರು ಕೊಡಲು ಯೋಚಿಸಿದಾಗಲೇ ಡಿಕ್ಕಿ ಓಡುತ್ತ ಬಂದ. ಮುಖ ಮೈಗಳಲ್ಲಿ ಉತ್ಸಾಹವೇ ಉತ್ಸಾಹ!

"ಅಮ್ಮಾ! ನಾನು ಹುಲಿ ಮುಟ್ಟಿ, ಬಾಲ ಹಿಡಿದೆಳೆದೆ!"

"O! my God! ಎಂಥ ಮಗುವೊ ನೀನು! ಹೇಗೆ ಮುಟ್ಟಿದೆ? ಹೇಗೆ ಸಾಧ್ಯವಾಯಿತು?" ಒಂದೇ ಉಸಿರಿಗೆ ಕೇಳಿದಳು ಮಾರಿಯಾ.

ರೋಸಿ ಪುಟ್ಟ ಕಣ್ಣುಗಳನ್ನು ಮಿಟುಕಿಸದೆ ನೋಡುತ್ತಿದ್ದಾಳೆ.

"ಅದು ಆ ಕಡೆ ತಿರುಗಿ ನಿಂತಿತ್ತು! ಬಾಲ ಎಳೆದರೆ ತಿಳಿಯಲೇ ಇಲ್ಲ!"

ಕೇಕೆ ಹಾಕಿ ನಕ್ಕು ಬಿಟ್ಟ ಡಿಕ್ಕಿ!

ಚೆಸ್ಸಿಂಗ್‌ಟನ್ ಜೂ-೧೧

ಮಕ್ಕಳು ಹತ್ತಿರ ಹೋಗಬಾರದೆಂದು ಕಬ್ಬಿಣದ ಬೇಲಿಯ ರಕ್ಷಣೆಯೂ ಇದೆ. ಪೋಲೀಸರೂ ಇರುತ್ತಾರೆ. ಆದರೂ ಈ ಡಿಕ್ಕಿಯ ಸಾಹಸ ಕಾರ್ಯಕ್ಕೇನೆನ್ನಬೇಕು ? ಅದು ಮುಖಾಮುಖಿಯಾಗಿದ್ದಿದ್ದರೆ ಕೈ ತಿಂದು ಬಿಡುತಿತ್ತು ! ದೇವರೇ ಕಾಪಾಡಿದ !

ಉದ್ಗರಿಸಿದಳು ಮಾರಿಯಾ. ಮುಖಬಿಂಬದಲ್ಲಿ ರೋಷ ತೋಷ ಕಳವಳಗಳು ಸಮ್ಮಿಳಿತವಾಗಿದ್ದುವು.

—o—

ಕಲಿಯದೆ ಬಾರದು ವಿದ್ಯೆ
ನೂಕದೆ ಹೋಗದು ಮಿಥ್ಯೆ
ದುಡಿಯದೆ ಬಾರದು ಅರ್ಥ
ಬಲಿಸದೆ ಅರಳದು ಬುದ್ಧಿ
ಬರೆಯದೆ ಬಾರದು ಅಕ್ಕರ

—o—

ಆ್ಯನ್ ಸೂಯಿಂಕ

ಆಫ್ರಿಕಾ ದೇಶದಲ್ಲಿ ಆ್ಯನ್ ಸೂಯಿಂಕ ಎಂಬ ವಿಧವೆ ಯಿದ್ದಳು.

ಅವಳು ಖರ್ಚು ವೆಚ್ಚದಲ್ಲಿ ತುಂಬಾ ಇತಿಮಿತಿ. ಅವಳು ಮಾಡುವುದು ಕೂಲಿ ಕೆಲಸ. ಹಿರಿಯ ಮಗಳು ಸೋನಿ ಸೂಯಿಂಕ ಒಬ್ಬ ಸಿರಿವಂತನನ್ನು ಮದುವೆಯಾಗಿ ಹೊರಟು ಹೋದಳು. ಎರಡನೆಯವಳು ಉಪಾಧ್ಯಾಯಿನಿ ಯಾಗಿ ನೆರೆ ಊರು ಸೇರಿದಳು. ಮೂರನೆಯವಳ ಬಾಳು ತಾಯಿಯ ರೀತಿಯಲ್ಲಿಯೇ ಬಡತನ. ಅವಳು ಅದೇ ನಗರದಲ್ಲಿದ್ದರೂ ಹತ್ತು ಮೈಲಿಗಳಷ್ಟು ದೂರದಲ್ಲಿ ವಾಸ. ಗಂಡು ಮಗ ಇದ್ದೂ ಇಲ್ಲದಂತೆ. ಉಂಡಾಡಿ ಗುಂಡ.

ಆ್ಯನ್ ಸೂಯಿಂಕ ದಮ್ಮು ರೋಗಿ.

ಅದರಿಂದ ದುಡಿದು ತಿನ್ನುವುದೂ ಕಷ್ಟ. ಕೂಡಿದಾಗ ಕೂಲಿಮಾಡಿ ಇಲ್ಲದಾಗ ಗುಡಿಸಲಲ್ಲಿ ಬಿದ್ದುಕೊಂಡಿರು ತಿದ್ದಳು. ಅವಳಿಗೆ ಸಹಾಯಕರಾರೂ ಇರಲಿಲ್ಲ. ಅವಳ ಬಳಿ ಒಂದು ನಾಯಿ ಇತ್ತು ಅದರ ಹೆಸರು ವಾಲಿ. ಅದಕ್ಕೆ ಒಡತಿಯಲ್ಲಿ ತುಂಬಾ ಪ್ರೀತಿ. ಸದಾ ಬಾಗಿಲಲ್ಲೇ ಮಲ ಗಿದ್ದುಕೊಂಡು ಕಾವಲು ಕಾಯುತಿತ್ತು. ಅವಳು ಕೂಲಿಗೆ

ಹೋದರೆ ಅವಳೊಡನೆಯೇ ಹೋಗಿದ್ದು, ಅವಳೊಡನೆ ಹಿಂದಿರುಗುವುದು ವಾಡಿಕೆ. ಅದರ ನಿಷ್ಠೆಯನ್ನು ನೋಡಿ ದರೆ ಎಲ್ಲರಿಗೂ ಆಶ್ಚರ್ಯ. ಆ್ಯನ್ ಸೂಯಿಂಕಾಳ ಮಗ ರಾಬರ್ಟ್ ಸೂಯಿಂಕ ಇದ್ದಕ್ಕಿದ್ದಂತೆಯೇ ಹೇಳದೆ ಕೇಳದೆ ಮನೆಬಿಟ್ಟವನು. ಅವನು ಬದುಕಿರುವ ಸಂಗತಿಯೂ ತಿಳಿ ಯದು. ಅವನು ಹೋಗಿ ಆಗಲೇ ಐದಾರು ವರ್ಷಗಳು ಸಂದುವು. ಅವನ ಆಸೆಯೂ ಕೂಡ ಈಗೀಗ ಇಲ್ಲ, ಬರುವ ನಂಬುಗೆಯೂ ಇಲ್ಲ.

ಮಧ್ಯರಾತ್ರಿ... ಬೆಳದಿಂಗಳ ಸುಳಿವಿಲ್ಲ. ಕಣ್ತಿವಿ ಯುವ ಕತ್ತಲು.

ಆ್ಯನ್ ಸೂಯಿಂಕ ದಮ್ಮುರೋಗದಿಂದ ಮೇಲುಸಿರು ಬಿಡುತಿದ್ದಾಳೆ. ವಾಲಿ ಮಗ್ಗುಲಲ್ಲಿಯೇ ಮಲಗಿದೆ. ಆ್ಯನ್ ನರಳುತ್ತ ನಾಯಿಯ ಮೇಲೆ ಕೈಯಿಟ್ಟು ಹೇಳಿದಳು,

"ವಾಲೀ, ನಾನು ಬಹಳ ಕಾಲ ಬದುಕಲಾರೆ... ಮಕ್ಕಳಿಗೆ ಸುದ್ದಿ ಮುಟ್ಟಿಸಬೇಕಿತ್ತು ಹೋಗಿ ಹೇಳುವವರು ಯಾರೂ ಇಲ್ಲವಲ್ಲಾ ?"

ವಾಲಿ ಕುಂಯಿ ಕುಂಯೀ ಎನ್ನುತ್ತ ಬಾಗಿಲ ಬಳಿಗೆ ಹೋಗಿ ಅತ್ತಿತ್ತ ನೋಡಿ ಹಿಂದಿರುಗಿ ಬಂದು ಬಳಿಯಲ್ಲಿ ನಿಂತು ಮುಖ ಮೈಯನ್ನು ಮೂಸಿ ನೋಡಿತು. ಬೆಳ ಗಾಗಲು ಇನ್ನೂ ಬಹಳ ಸಮಯ ಬೇಕು. ಬಾಗಿಲನ್ನು ಮೂತಿಯಿಂದ ಕಚ್ಚಿ ನೂಕಿ ತಳ್ಳಿ ಬಳಿಯಲ್ಲೇ ಕಾದು ಕುಳಿ ತಿತು. ಸ್ವಲ್ಪ ಹೊತ್ತು ಉರುಳಿತು. ಬಾಗಿಲಲ್ಲಿ ಯಾರದೋ ಬೂಟು ಕಾಲಿನ ಸದ್ದು. ಪಟ. ಪಟ. ಪಟ. ಪಟ.

ನಾಯಿ ಬೌ ಬೌ ಎಂದು ಬೊಗಳಿತು.

ಪಾದ ಸಪ್ಪಳ ಹೊಸ್ತಿಲ ಬಳಿ ನಿಂತಿತು. ವಾಲಿ ಅತ್ತ ಧಾವಿಸಿತು. ಬಂದವ ಬಾಗಿಲನ್ನು ತಳ್ಳಿ "ಷ್ ! ವಾಲೀ !" ಎಂದ.

ಹತ್ತು ವರುಷಗಳ ಹಿಂದೆ ಹೊರಹೋಗಿದ್ದ ಯಜಮಾನನ ದನಿಯನ್ನು ಗುರುತಿಸಿ 'ಕುಂಯೀ ಕುಂಯೀ' ಎಂದರೂ ಅಡ್ಡಗಟ್ಟಿತು ಒಳ ಬರದಂತೆ.

"ಯಾರದು...?" ನರಳು ದನಿಯಲ್ಲಿ ಕೇಳಿದಳು ಆ್ಯನ್.

"ನಾನು ಟೆಡ್ಡಿ ಸೂಯಿಂಕ !"

ಅರೆರೆ !

ಆ್ಯನ್ ಸೂಯಿಂಕ ಅತ್ತಲೇ ದೃಷ್ಟಿ ಹೊರಳಿಸಿದಳು. ಕತ್ತಲೆಯ ಗವಿಯಲ್ಲಿ ಏನೂ ಕಾಣಿಸಲಿಲ್ಲ. ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದರೆ ಸಾಧ್ಯವಾಗಲಿಲ್ಲ. ಟೆಡ್ಡಿ ಸೂಯಿಂಕ ಸತ್ತು ಹೋಗಿ ಆರೇಳು ವರ್ಷ ಕಳೆದಿವೆ. ಇನ್ನೆಲ್ಲಿ ಟೆಡ್ಡಿ ಸೂಯಿಂಕ ?

"ಯಾರದು...?" ಮತ್ತೆ ಕೇಳಿದಳು ಅವಳು.

ಉತ್ತರವಿಲ್ಲ. ವ್ಯಕ್ತಿ ಒಳಬಂದು ಬಳಿಯಲ್ಲಿ ನಿಂತ. ನಾಯಿ ಅಲ್ಲಲ್ಲೇ ಸುತ್ತುತ್ತಿದೆ. ಆ್ಯನಳ ಮನವನ್ನು ಭಯಾಶ್ಚರ್ಯಗಳು ಮುತ್ತಿದುವು.

"ಆ್ಯನ್, ನೀನಿನ್ನು ನರಳುತ್ತ ಇರುವುದು ಒಳಿತಲ್ಲ. ಹೊರಡು ಹೋಗೋಣ."

"ಎಲ್ಲಿಗೆ...?"

ಗಾಬರಿಯಿಂದ ಕೇಳಿದಳು ಆ್ಯನ್. ಹೃದಯ ಡಬಡಬ ಮಿಡಿಯಿತು.

ಉತ್ತರವಿಲ್ಲ. ಬಂದವರು ಹೊರಟು ಹೋದಂತೆ ಅನುಭವ. ಬೂಟಿನ ಸದ್ದು ಹೊಸ್ತಿಲನ್ನು ದಾಟಿದ ನಂತರ ಕೇಳಿ ಬರಲಿಲ್ಲ.

ಪಕ್ಕದ ಮನೆಯಲ್ಲಿ ಕೋಳಿ ಕೂಗಿತು. ಕೊಕ್ಕೊ ಕೋ ! ಕೋಳಿ ಮತ್ತೆ ಮತ್ತೆ ಕೂಗಿತು. ಎದೆಯಲ್ಲಿ ದಮ್ಮು ಉಸಿರು ಕಟ್ಟಿಸುತ್ತಿದೆ. ಇನ್ನೇನು ಈಗಲೇ ಪ್ರಾಣ ಹೋಗಬಹುದು. ಟೆಡ್ಡಿ ಸೂಯಿಂಕ ಬಂದಾಗಲೇ ಪ್ರಾಣ ಹೋಗಿದ್ದಿದ್ದರೆ ಒಳ್ಳೆಯದಿತ್ತು. ಅವನು ಹೋಗಿಬಿಟ್ಟನಲ್ಲಾ ಎಂಬ ಯೋಚನೆಯೂ ಬಂತು.

ಬೆಳ್ಳನೆ ಬೆಳಗಾಗುತ್ತಿದೆ.

ಕಾಗೆ ಆಗಲೇ ಅರಚಿತು. ಕಾ! ಕಾ! ಗಾಳಿ ತಣ್ಣಗೆ ಬೀಸುತ್ತಿದೆ.

ಆ್ಯನ್ ಬಾಗಿಲ ಕಡೆ ನೋಡಿದಳು. ಅಲ್ಲಿ ಯಾರೂ ಇರಲಿಲ್ಲ. ಎದ್ದೇಳಲು ಪ್ರಯತ್ನಿಸಿದರೆ ಆಗಲೊಲ್ಲದು. ವಾಲಿ ಬಳಿಗೆ ಬಂದು 'ಕುಂಯೀ ಕುಂಯೀ' ಎನ್ನುತ್ತ ಮೂಸಿ ಮೂಸಿ ನೋಡಿ ಓಡುತ್ತಲೇ ಹೋಯಿತು ಕೊನೆಯ ಮಗಳ ಬಳಿಗೆ. ಕಿಟ್ಟೀ ಸೂಯಿಂಕ ಕೆಲಸಕ್ಕೆ ಹೊರಡುವುದರಲ್ಲಿದ್ದಳು. ವಾಲಿಯನ್ನು ಕಂಡ ಕೂಡಲೇ ಏನೋ ಪ್ರಮಾದ ಎಂದುಕೊಂಡು ಇಬ್ಬರು ಅಕ್ಕಂದಿರಿಗೂ ತಾಯಿಯನ್ನು ಬಂದು ನೋಡಲು ತಿಳಿಸಿ ವಾಲಿಯೊಂದಿಗೆ ತಾನೂ ಹೊರಟಳು. ಟ್ಯಾಕ್ಸಿ ಹಿಡಿದು ಮನೆ ಮುಟ್ಟಿದಾಗ ಬಹಳ ಹೊತ್ತೇನೂ ಆಗಿರಲಿಲ್ಲ. ಒಳಹೋಗಿ ತಾಯಿಯನ್ನು ನೋಡಿದರೆ ಒಡಲು ಸಂಕಟದ ಗಣಿಯಾಯಿತು.

"ನಿನ್ನ ಅಕ್ಕಂದಿರೆಲ್ಲಿ ?" ಕೇಳಲಾರದೇ ಕೇಳಿದಳು ಆ್ಯನ್.

"ಇಬ್ಬರಿಗೂ ಇಲ್ಲಿಗೆ ಬರಲು ತಿಳಿಸಿರುವೆ. ಬಹುಶಃ ಬೇಗನೆ ಬಂದಾರು."

"ನೋಡು ಮಗಳೇ ! ನನ್ನ ಹಾಸಿಗೆಯ ಪದರದಲ್ಲಿ ಮಧ್ಯೆ ಕೂಲಿಯ ಹಣವೆಲ್ಲ ಕೂಡಿಸಿಟ್ಟಿರುವೆ. ಅಲ್ಲದೆ, ಈ ಹಾಸಿಗೆಯ ಅಡಿಯಲ್ಲಿ ನೆಲ ಅಗೆದು ಒಂದು ಕುಡಿಕೆ ಮುಚ್ಚಿಟ್ಟಿರುವೆ. ಅದರಲ್ಲಿ ಬಂಗಾರದ ಸರ ಬಳೆಗಳಿವೆ. ಇವಿರುವುದು ಯಾರಿಗೂ ತಿಳಿಯದು. ನಿನ್ನ ಅಕ್ಕಂದಿರು ಬಂದರೆ ಮೂವರೂ ಹಂಚಿಕೊಳ್ಳಿ. ಇಲ್ಲವಾದರೆ ನೀನೊಬ್ಬಳೇ ತೆಗೆದುಕೊ. ವಾಲಿಯನ್ನು ಚೆನ್ನಾಗಿ ಸಾಕಿಕೊ. ತುಂಬಾ ಒಳ್ಳೆಯ ನಾಯಿ" ಎಂದಳು. ದನಿಯಲ್ಲಿ ಅತೀವ ಆಯಾಸ ತುಂಬಿ ಹರಿಯಿತು.

ವಾಲಿ ಹಾಸಿಗೆಯ ಬಳಿಯಲ್ಲೇ ಕುಳಿತುಕೊಂಡು ತಾಯಿಯ ಮರಣ ಸಂಕಟವನ್ನು ತಿಳಿದು ತನ್ನಲ್ಲೇ ಕೊರಗಿತು.

"ಮಗಳೇ, ನಿನ್ನೆ ರಾತ್ರಿ ನಿನ್ನ ಅಪ್ಪ ಸ್ವತಃ ಬಂದು 'ಹೊರಡು ಹೋಗೋಣ' ಎಂದು ಹೇಳಿ ಹೋಗಿದ್ದಾನೆ. ನನ್ನ ದಾರಿ ಸುಗಮ. ನಾನು ಸಾಯುವುದಕ್ಕೆ ಹೆದರುವುದಿಲ್ಲ. "

"ನೀನು ಸಾಯಬೇಡ. ನನ್ನ ಸಂಸಾರವನ್ನು ಇಲ್ಲಿಗೇ ಸಾಗಿಸಿ ನಾನು ನಿನ್ನೊಂದಿಗಿರುವೆ."

"ಬಿಡು ಮಗಳೇ ! ಸಾವು ಸನ್ನಿಹಿತವಾಗಿದೆ. ಇನ್ನೆಲ್ಲಿಯ ಬದುಕು..."

"ಅಮ್ಮಾ, ನನಗೇನು ಹೇಳುತ್ತಿ? ನಾನು ಮಾಡಬೇಕಾದ್ದು ಏನಿದೆ?"

"ನೋಡೋಣ, ಮಗಳೇ! ಈ ರಾತ್ರಿ ಕಳೆಯಲಿ."

ಹಗಲು ಕಳೆಯಿತು. ರಾತ್ರಿ ಅಡರಿ ಬಂತು.

ಆ್ಯನ್ ಸೂಯಿಂಕ ಮಗಳಿಗೆಂದಳು "ಈ ರಾತ್ರಿ ನಾನು ಹೋಗುವುದೇ ಸೈ. ನೀನು ನನ್ನ ವಸ್ತುಗಳನ್ನು ತೆಗೆದುಕೊಂಡು ನಿನ್ನ ಮನೆಗೇ ಹೋಗು. ವಾಲಿಯನ್ನು ಮರೆಯಬೇಡ. ನೀನು ಸುಖವಾಗಿರು."

ಆಗಲೇ ಬಾಗಿಲಲ್ಲಿ ಪಾದ ಸಪ್ಪಳ ಕೇಳಿಸಿತು. ವಾಲಿ ಬೊಗಳುತ್ತಿದ್ದಂತೆಯೇ ಬೂಟು ಕಾಲಿನ ಸಪ್ಪಳ ಹತ್ತಿರದಲ್ಲಿ ಕೇಳಿಸಿತು.

"ಏಳು ಆ್ಯನ್! ನಾನು ಸ್ವರ್ಗದಿಂದ ಕರೆಯಲು ಬಂದಿರುವೆ!"

"ಯಾರು ನೀನು?"

"ನಾನು ಟೆಡ್ಡಿ ಸೂಯಿಂಕ!"

"ಓ!" ಎನ್ನುತ್ತ ಮೇಲೇಳಲು ಪ್ರಯತ್ನಿಸಿದ ಆ್ಯನ್ ಹಾಗೇ ಕುಸಿದು ಬಿದ್ದಳು.

— o —

ಚೆಲುವಿನ ಚಿಲುಮೆ

ಚೀನಾದೇಶದಲ್ಲಿ ಕುಬ್ಲಾಯಿ-ಷಿನ್ ಎಂಬ ಬಡವ ಕೂಲಿಕಾರನಿದ್ದ.

ಅವನು ನೆರೆಯ ಅಡವಿಗೆ ಕಟ್ಟಿಗೆ ತರಲು ಹೋದ. ಬಿಸಿಲು ಬಹಳವಾಗಿದ್ದುದರಿಂದ ತುಂಬಾ ಬಾಯಾರಿಕೆ-ತಡೆಯಲಾಗದ ದಾಹ. ಅವನಿಗೆ ಹಿಂದೆಂದೂ ಹಾಗಾಗಿರಲಿಲ್ಲ. ಗಂಟಲು ಒಣಗಿಸುವಂತಹ ದಾಹ. ಕಡಿದ ಕಟ್ಟಿಗೆಯನ್ನು ಹೊರೆ ಕಟ್ಟಿಟ್ಟು ನೀರಿಗಾಗಿ ಹುಡುಕಲಾರಂಭಿಸಿದ. ಅಲೆದು ಅಲೆದು ಸಾಕಾಯಿತು. ಎಲ್ಲಿಯೂ ನೀರಿನ ಕುಂಡ ಕಣ್ಣಿಗೆ ಕಾಣಿಸಲೇ ಇಲ್ಲ. ಒಂದು ಮರದ ಬುಡದಲ್ಲಿ ಕಾಲು ಚಾಚಿ ಕುಳಿತ. ಮುಖಮೈಗಳಲ್ಲಿ ಬೆವರು ಇಳಿದು ಹೋಯಿತು. ಕುಬ್ಲಾಯಿ-ಷಿನ್ ಹಾಗೇ ಕಣ್ಣು ಮುಚ್ಚಿದ. ಸಣ್ಣ ನಿದ್ದೆಯ ಮಂಪರ ಆವರಿಸಿತು ಕಣ್ಣುಗಳಿಗೆ.

ಕನಸಿನಲ್ಲಿ ಬಿಳಿಯುಡುಪಿನ ಕಿನ್ನರಿ ಕಾಣಿಸಿಕೊಂಡಳು.

"ಕುಬ್ಲಾಯಿ-ಷಿನ್ ನೀರಿಗಾಗಿ ಎಷ್ಟೊಂದು ಶ್ರಮ ಪಡುತಿದ್ದೀಯೆ ! ಹೀಗೆಯೇ ನೇರವಾಗಿ ಉತ್ತರಾ ಪಥ ಹಿಡಿದು ಹೋಗು. ಅಲ್ಲೊಂದು ಸಣ್ಣ ಮುತ್ತಿನ ಕೆರೆಯಿದೆ.

ಅದರ ನೀರಿನ ಮೇಲೆ ಮುತ್ತಿನಂತಹ ಗುಳ್ಳೆಗಳಿರುತ್ತವೆ. ಅದರಲ್ಲಿ ಒಂದು ಬೊಗಸೆ ನೀರು ಮಾತ್ರ ಕುಡಿ. ಜ್ಞಾಪಕ ವಿರಲಿ !"

ಅವನು ತಕ್ಷಣ ಕಣ್ಣು ಬಿಟ್ಟ. ಆ ಮಾತುಗಳು ಇನ್ನೂ ಕಿವಿಯಲ್ಲಿ ಮೊರೆಯುತ್ತಲೇ ಇವೆ.

ದಾಹ ಎಂದರೆ ಪ್ರಾಣಾಂತಕ ದಾಹ. ಒಂದು ಕೊಡ ನೀರಿದ್ದರೂ ಸಾಲದು ಎಂಬಷ್ಟು ದಾಹವಿರುವಾಗ ಒಂದೇ ಒಂದು ಬೊಗಸೆ ನೀರಿಗಾಗಿ ಏಕೆ ಕೆರೆ ಹುಡುಕಿಕೊಂಡು ಹೋಗಲಿ ? ಮನೆಗೇ ಹಿಂತಿರುಗಿ ಹೋಗುವೆ ಎಂದು ಕೊಂಡ, ಕುಬ್ಲಾಯಿ-ಖಿನ್.

ಆದರೆ...?

ಆ ತಾಯಿಯ ಮಾತಿಗೆ ಬೆಲೆ ಕೊಡದೆ ಹೋಗುವು ದುಂಟೇ ಎನಿಸಿ ಉತ್ತರಾ ಪಥ ಹಿಡಿದು ಹೊರಟ. ಮುಂದೆ ಸ್ವಲ್ಪೇ ದೂರದಲ್ಲಿ ಚೆಲುವಿನ ಚಿಲುಮೆಯಂತಹ ಸಣ್ಣ ಕೆರೆ. ನೀರು ಸುನೀಲ ವರ್ಣದಿಂದ ಥಳಥಳಿಸುತ್ತಿದೆ. ಅದರ ಮೇಲೆ ಮುತ್ತಿನ ಮಣಿಮಣಿಯಂತಹ ಗುಳ್ಳೆಗಳು. ಕುಬ್ಲಾಯಿ-ಖಿನ್ ಆನಂದದಿಂದ ಬೊಗಸೆ ನೀರೆತ್ತಿ ಕುಡಿದ. ಒಮ್ಮೆಲೇ ದಾಹ ಅಡಗಿ ಹೋಯಿತು. ಅಷ್ಟು ಮಾತ್ರವಲ್ಲ, ಮೈ ದಟ್ಟಪುಷ್ಟಿಯಾಗಿ ಆರೋಗ್ಯವಂತನಾದ. ತನ್ನ ಮೈ ಯನ್ನು ನೋಡಿಕೊಂಡವನೇ ಅತ್ಯಂತ ಆಶ್ಚರ್ಯವಂತನಾದ.

ಎಂತಹ ದೃಢಕಾಯ !

ತಲೆ ಬಾಗಿ ನೀರಿನಲ್ಲಿ ಮುಖ ನೋಡಿಕೊಂಡ. ಐವತ್ತರ ಪ್ರಾಯದವನಿಗೆ ಇಪ್ಪತ್ತರ ತರುಣನಂತಹ ಸುಂದರ

ದುಂಡು ಮುಖ ! ಗುಳಿಬಿದ್ದಿದ್ದ ಕೆನ್ನೆಗಳು ತುಂಬಿಕೊಂಡು ನೋಡಲು ಬಲು ಆ ಅಂದವೋ ಆನಂದ !

ಸಂತೋಷದ ಗಣಿಯಾಗಿ ಮನೆಯ ಕಡೆ ದೌಡಾಯಿಸಿದ. ಕಟ್ಟಿಗೆಯ ಹೊರೆ ತೆಗೆದುಕೊಳ್ಳುವುದೂ ಮರೆತು ಹೋಯಿತು. ಮನೆಯಲ್ಲಿ ಕೆಲಸದ ಮೇಲಿದ್ದ ಮಡದಿಗೆ ಅವನನ್ನು ನೋಡಿ ಯಾರೋ ಅಪರಿಚಿತ ವ್ಯಕ್ತಿ ಮನೆಗೆ ನುಗ್ಗಿದನೆಂದು ಗಾಬರಿಯಿಂದ ಚೀರಿದಳು.

"ಅಯ್ಯೋ ಗಾಬರಿಗೊಳ್ಳಬೇಡ. ನಾನು ಕುಬ್ಲಾಯಿ ಕಣೆ. ನೋಡು ! ಕುಬ್ಲಾಯಿ-ಪಿನ್ !"

ಅವಳು ಅಗಲವಾಗಿ ಕಣ್ಣು ಬಿಟ್ಟು ನೋಡಿದಳು. ಅವನು ತನ್ನ ಗಂಡನೇ ಹೌದೆಂದು ನಂಬಬೇಕಾದರೆ ಸ್ವಲ್ಪ ಹೊತ್ತೇ ಬೇಕಾಯಿತು.

"ನೋಡು, ಯಾಂಗ್-ಚಿನ್ ! ನನಗೆ ಕಿನ್ನರಿಯ ಅನುಗ್ರಹವಾಯಿತು. ಆದ್ದರಿಂದ ಈ ಪ್ರಾಯ ಕೂಡಿ ಬಂತು ! ನಡೆ ನನ್ನೊಂದಿಗೆ. ಆ ಕೆರೆಯ ಬಳಿಗೆ ಕರೆದೊಯ್ಯುವೆ. ನೀನೂ ಮುತ್ತಿನ ಕೆರೆಯ ನೀರು ಕುಡಿದರೆ ನನ್ನಂತೆಯೇ ಗಟ್ಟಿಮುಟ್ಟಾಗುತ್ತಿ !"

ಅವಳು ಆ ಮಾತನ್ನು ಕೇಳಿ ಉತ್ಸಾಹದಿಂದ ಅವನೊಂದಿಗೆ ಹೊರಟಳು. ಇಬ್ಬರೂ ಆ ತಾಣಕ್ಕೆ ಓಡುತ್ತಲೇ ಹೋದರು.

ಕೆರೆಯ ತೀರವನ್ನು ಸೇರುತ್ತಲೂ ಸುನೀಲ ವರ್ಣದ ನೀರಿನ ಮೇಲೆ ಮುತ್ತಿನಂತಹ ಬಿಳಿಯ ಗುಳ್ಳೆಗಳನ್ನು ನೋಡಿ ಸುಖಮೂರ್ಛೆ ಬರುವಂತಾಯ್ತು, ಮಡದಿಗೆ. ಅವಳು ಆ ಕ್ಷಣವೇ ಬೊಗಸೆ ತುಂಬಾ ನೀರೆತ್ತಿ ಕುಡಿದಳು.

ಆ ಕ್ಷಣವೇ ಅವಳಿಗೂ ಮೈಯಲ್ಲಿ ಯೌವ್ವನ ಕೂಡಿ ಬಂತು! ಇಪ್ಪತ್ತರ ಹುಡುಗಿಯಂತಾದಳು. ತುಂಬಿಕೊಂಡ ಮೈ, ಮೃದುವಾದ ಚರ್ಮ, ಕೆಂಪು ಕೆಂಪು ಕೆನ್ನೆಗಳು !

ಇಬ್ಬರೂ ಸಂತೋಷದಿಂದ ಆಲಂಗಿಸಿಕೊಂಡರು.

"ನಾವು ಇನ್ನೂ ಒಂದು ಬೊಗಸೆ ನೀರು ಕುಡಿದರೆ ಮತ್ತಷ್ಟು ಚೆನ್ನಾಗಬಹುದು !"

"ಕಿನ್ನರಿ ಹೇಳಿದ್ದು ಒಂದೇ ಬೊಗಸೆ ಕುಡಿಯಿರಿ ಎಂದು !"

"ಏಕೆ ಹಾಗೆಂದಳು ? ಅದರಿಂದ ಕೆಡುಕಾಗುವುದೆಂದು ಹೇಳಿದ್ದಾಳೆಯೇ ?"

"ಹಾಗೆಂದು ಹೇಳಲಿಲ್ಲ. ಒಂದಕ್ಕಿಂತ ಹೆಚ್ಚು ಕುಡಿಯ ಬೇಡ ಎಂದಳು ಅಷ್ಟೆ."

"ಒಂದು ಬಾರಿ ಮಾತ್ರ ಪ್ರಯತ್ನಿಸಿ ನೋಡೋಣ."

ಆ ಮಾತಿಗೆ ಕುಬ್ಲಾಯಿ-ಪಿನ್ ಒಪ್ಪಿದ.

ಇಬ್ಬರೂ ಕೂಡಲೇ ಒಂದು ಬೊಗಸೆ ನೀರೆತ್ತಿ ಕುಡಿದು ಬಿಟ್ಟರು. ಆ ಕ್ಷಣವೇ ಅವರಿಬ್ಬರೂ ದೊಡ್ಡ ದೊಡ್ಡ ನೀರಾನೆಗಳಾಗಿ ಮೇಯಲು ಹೊರಟರು. ತಮ್ಮ ಅಚಾತುರ್ಯದ ಅರಿವು ಲವಲೇಶವೂ ಆಗಲಿಲ್ಲ, ಪ್ರಾಣಿಗಳಿಗೆ.

—o—

ಚಿನ್ನದ ಗುರಿ

ಆನಂದಪುರದ ಹೊಸ ಶಾಲೆ.

ಭೀಮಣ್ಣ ಮಾಸ್ತರು ಹೆದ್ದಾರಿಯನ್ನು ಬಿಟ್ಟು ಬಯಲಿಗೆ ಹೆಜ್ಜೆಯಿಟ್ಟಾಗಲೇ ದೊಡ್ಡ ಬಯಲಿನ ಮಧ್ಯೆ ತಲೆಯೆತ್ತಿದ್ದ ಹೊಸ ಕಟ್ಟಡವನ್ನು ಕಣ್ತುಂಬ ಕಂಡರು. ಅಂಗಳದಲ್ಲಿ ಇನ್ನೂ ಕಲ್ಲು ಮಣ್ಣುಗಳ ರಾಶಿ ಅಲ್ಲಲ್ಲಿ ಕಂಡು ಬರುತ್ತದೆ, ಇತ್ತೀಚೆಗೆ ಕಟ್ಟಿದ ಶಾಲೆಗೆ ಸಾಕ್ಷಿಯಾಗಿ. ಶಾಲೆಯ ಸುತ್ತಮುತ್ತ ತುಂಬಾ ವಿಶಾಲವಾದ ಸ್ಥಳವಿರುವುದರಿಂದ ನೋಟಕ್ಕೆ ಹಿತ.

ಬಯಲನ್ನು ದಾಟಿ ಶಾಲೆಯ ಮೆಟ್ಟಿಲನ್ನು ಏರಿದಾಗ ಕಂಡು ಬಂದ ಮುಖ್ಯೋಪಾಧ್ಯಾಯರು ಕೈ ಕುಲುಕಿ "ಆಫೀಸಿಗೆ ಹೋಗಿ ರಿಪೋರ್ಟ್ ಮಾಡಿಕೊಳ್ಳಿ" ಎಂದರು.

ಅದೇ ತಾನೇ ಸಹಿ ಹಾಕುತಿದ್ದ ಇತರ ಮಾಸ್ತರುಗಳು ಪಿ.ಟಿ. ಮಾಸ್ತರ್ ಆಗಿ ಬಂದ ಭೀಮಸೇನ ಮಾಸ್ತರ ದೈಹಿಕ ಸಂಪತ್ತನ್ನು ನೋಡಿ "ನೀವು ಪಿ. ಟಿ. ಮಾಸ್ತರ್ ಆಗುವುದಕ್ಕೆ ಸರಿಯಾದ ವ್ಯಕ್ತಿ !" ಎಂದೊಬ್ಬರು ನುಡಿದರೆ ಅನೇಕರು "ಹೌದು ಹೌದು !" ಎಂದರು.

ಆ ಮಾತು ಮನದಾಳಕ್ಕೆ ಇಳಿಯಿತು.

"ಹಿಂದೆಲ್ಲಾ ಏನೋ ಒಂದು ರೀತಿ. ಈಗ ಸ್ಪೋರ್ಟ್ಸ್‌ನಿಂದ ಒಳ್ಳೆ ಕೀರ್ತಿ ! ನಮ್ಮ ಶಾಲೆಯಲ್ಲಿ ಆ ಫೀಲ್ಡ್‌ನಲ್ಲಿ ಕಳೆಯೇ ಇಲ್ಲ. ನೀವು ಚೆನ್ನಾಗಿ ಟ್ರೈನಿಂಗ್ ಕೊಡಬೇಕು ಸರ್ ! ಹೊಸ ಶಾಲೆಗೆ ಹೊಸಕೀರ್ತಿ ಬರಬೇಕು ನೋಡಿ !"

"ಆಗಲಿ...ಆಗಲಿ."

ಭೀಮಣ್ಣ ಎಲ್ಲಾ ಮಾಸ್ತರುಗಳನ್ನು ಕಂಡು ಪರಸ್ಪರ ಪರಿಚಯ ಮಾಡಿಕೊಂಡ ಬಳಿಕ ಹುಡುಗರ ಗ್ಯಾಂಗ್ ಕಡೆ ಹೋದರು. ಊಟದ ಬಿಡುವಿಗಾಗಿ ಹುಡುಗರೆಲ್ಲಾ ಇದ್ದಾರೆ. ನಾಳೆಯಿಂದ ಸ್ಪೋರ್ಟ್ಸ್ ಟ್ರೈನಿಂಗ್. ನಾನು ಇದುವರೆವಿಗೂ ಯಾವೊಂದು ಶಾಲೆ ಟ್ರೈನಿಂಗ್‌ನಲ್ಲಿಯೂ ಕೀರ್ತಿದಾಯಕವಾಗಿ ಮುಂದೆ ನಿಲ್ಲಲಾಗಲಿಲ್ಲ. ಈ ಸಲಿ ನನ್ನ ಅದೃಷ್ಟ ಬೆಳೆಸಿಕೊಳ್ಳಬೇಕು ಎಂಬ ದೃಢಪ್ರಜ್ಞೆ ಒಲಿಯಿತು ಮನದಲ್ಲಿ.

ಮರುದಿನ ಎಲ್ಲಾ ಹುಡುಗರೂ ಫೀಲ್ಡಿಗೆ ಇಳಿದರು. ಪ್ರೌಢಶಾಲೆಯ ಹುಡುಗರು ಸುಡು ಬಿಸಿಲಲ್ಲ ಬೆವರಿಳಿಸುತ್ತ ಡ್ರಿಲ್ ಮಾಡುತಿದ್ಧಾರೆ.

ಲೆಫ್ಟ್-ರೈಟ್ ! ಲೆಫ್ಟ್-ರೈಟ್ !

ನೂರು ಮೀಟರ್‌ಗಳ ಓಟಕ್ಕೆ ಫೀಲ್ಡ್ ತಯಾರಾಗಿದೆ ಹುಡುಗರು ಓಡುತ್ತಾರೆ. ಪಿ.ಟಿ. ಮಾಸ್ತರು ಹುರಿದುಂಬಿಸುತಿದ್ದಾರೆ. Go on ! Go on !

ಹುಡುಗರಲ್ಲಿ ಸೀತಾರಾಮನ ಆಟ್ತನ ಮತ್ತು ಉತ್ಸಾಹ ಮನವನ್ನು ಸೆಳೆಯಿತು. ಅವನಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದರೆ ಉತ್ತಮ ಪಟು ಆಗುವನೆಂಬ ನಂಬಿಕೆ ಮೂಡಿತು ಮನದಲ್ಲಿ. ಅವನಿಗೆ ಒಳ್ಳೆಯ ಟ್ರೈನಿಂಗ್ ಕೊಟ್ಟು ದೇಶಕ್ಕೆ

ಅರ್ಪಿಸುವುದರ ಮೂಲಕ ತಾನೊಬ್ಬ ಭಾರತಕ್ಕೆ ಕೀರ್ತಿ ತರುವಂತಹ ಕೋಚ್ ಆಗಲೇ ಬೇಕು ಎಂಬ ಅತೀವ ಆಶಾ ಸ್ಫೂರ್ತಿ ಹುರುಪು ನೀಡಿತು ಮಾಸ್ತರಿಗೆ. ಸೀತಾರಾಮನ ಮೈಕಟ್ಟು ಮೆಚ್ಚುವಂತಾದ್ದು. ಅವನಿಂದಲೇ ಈ ಶಾಲೆಗೆ ಕೀರ್ತಿ ಬರಬೇಕಾಗಿದೆ, ಎಂದೆಲ್ಲಾ ಮನದಲ್ಲೇ ಲೆಕ್ಕಾಚಾರ. ಶಾಲೆಯಿಂದ ಹೊರಡುವಾಗ ಸಿಕ್ಕಿದ ಸೀತಾರಾಮನ ಭುಜದ ಮೇಲೆ ಕೈಹಾಕಿ "ಸೀತೂ ! ನೀನು ಸ್ವಲ್ಪ ಕಷ್ಟಪಟ್ಟರೆ ರಾಷ್ಟ್ರಕ್ಕೆ ಕೀರ್ತಿ ತರುತ್ತಿ ! ನಿನಗೆ ದೈಹಿಕ ಸಂಪತ್ತಿದೆ. ಚಟುವಟಿಕೆಯೂ ಇದೆ ಪ್ರಯತ್ನಿಸು. ನಾನು ಹೇಳಿದಂತೆ ಕೇಳಿದರೆ ನೀನು ತುಂಬಾ ಜಾಣನಾಗುತ್ತಿ ! ಮುಂದಿನ ಒಲಂಪಿಕ್ಸ್‌ನಲ್ಲಿ ನಾವು ಭಾಗವಹಿಸಬಹುದು!" ಎಂದರು.

"ನನಗೆ ಸ್ಪೋರ್ಟ್ಸ್‌ನಲ್ಲಿ ಅಂತಹ ಇಷ್ಟವಿಲ್ಲ ಸರ್ !"

"ಛೆಃ ! ಛೆಃ ! ಹಾಗೆಂದವರುಂಟೇ ? ಹುಡುಗಿಯರು ಚಿನ್ನ ತಂದಿದ್ದಾರೆ ! ನೀನು ಹುಡುಗ ! ಹಾಗೆಂದರೆ ನಿನಗೇ ನಾಚಿಕೆಗೇಡು !"

ಅವನು ಮೌನಧಾರಣೆ ಮಾಡಿದ.

"ಸಿಯೋಲಿಗೆ ಹೋದ ಭಾರತೀಯ ಹುಡುಗರು ಸೋತು ಹೋದರು ! ಎಂತಹ ನಾಚಿಗೆಗೇಡು ! ಹುಡುಗರು ಓದುವುದಿಲ್ಲ ಎಂದರೆ ನಂಬಬಹುದು ; ಆಟ ಆಡಲಾರರು ಎಂದರೆ ನಂಬಬಹುದೇ ಹೇಳು ! ಆಟ ಸರಾಗ ! ನೀನು ಮುಂದೆ ಬರಬೇಕು. ನಿನಗೆ ತಕ್ಕ ದೈಹಿಕಾರೋಗ್ಯವಿದೆ ; ಶಕ್ತಿಯೂ ಇದೆ ಹೆದರಬೇಡ. ಸಧ್ಯ ಓಟ ಓಡು ! ಅನಂತರ ನೋಡು !"

ದಿನದಿನವೂ ಭೀಮಣ್ಣ ಮಾಸ್ತರು ಹುರಿದುಂಬಿಸುತ್ತಲೇ ಇದ್ದರು. ಅಷ್ಟಲ್ಲದೆ ಅವನ ಮನೆಗೂ ಹೋದರು. ಅವರ ಅತ್ಯಂತ ಸಾಮಾನ್ಯ ಸ್ಥಿತಿ ಬಡತನದ ಚಿತ್ರವನ್ನು ಎತ್ತಿ ತೋರಿಸಿತು. ಭೀಮಸೇನ ಮಾಸ್ತರಿಗೆ ಅವರನ್ನು ಸುಲಭದಲ್ಲಿ ಒಪ್ಪಿಸಲು ಬಡತನದ ಚಿತ್ರವೇ ಸಾಕಾಯ್ತು. ಹುಡುಗನ ಪ್ರಗತಿಯ ವಿಷಯದಲ್ಲಿ ಸಾಕಷ್ಟು ಭರವಸೆ ನೀಡಿ "ಅವನನ್ನು ಬೆಳಗಿನ ಹೊತ್ತು ಎಳಿಸಿ ಓಡಲು ಕಳುಹಿಸಿ" ಎಂದು ಹೇಳಿಯೇ ಬಂದರು.

ಆ ಬಡ ತಂದೆತಾಯಿಗಳಿಗೆ ಮಗನ ಪುರೋಭಿವೃದ್ಧಿಯನ್ನು ಕಣ್ತುಂಬ ನೋಡುವುದು ಬೇಕಾಗಿತ್ತು. ಬಡತನದ ನಿವಾರಣೆಗೆ ಸುಲಭದಾರಿಯೂ ಕೂಡ. ಅಂದಮೇಲೆ, ಮಾಸ್ತರ ಒತ್ತಾಯಕ್ಕಿಂತಲೂ ತಂದೆ ತಾಯಿಯರ ಒತ್ತಡ ಹೆಚ್ಚತೊಡಗಿತು. ಬೆಳಗಿನ ಝಾವದ ನಿದ್ರೆಗೆ ಕಲ್ಲು ಬಿತ್ತು. ಬೆಳಗೆದ್ದು ಓಡಲಾರದೇ ಓಡಹತ್ತಿದ. ದಿನದಿನಕ್ಕೂ ಅವನ ಮಾನಸಿಕ-ದೈಹಿಕ ಸ್ಥಿತಿ ತೀರಾ ಕರುಣಾಜನಕವಾಯ್ತು. ಅಷ್ಟಾಗಿ ನನಗದು ಒಗ್ಗುವುದಿಲ್ಲವೆಂದು ತಂದೆಯನ್ನು ಕೇಳಿ ಬೇಡಿಕೊಂಡರೂ ಕೋಪದಿಂದ ನಿಷ್ಠೂರವಾಗಿ ನುಡಿದು ಕಳುಹಿಸಿದರು. ತಾಯಿಯೂ "ನೀನು ಮಾಸ್ತರು ಹೇಳಿದಂತೆ ಕೇಳು !" ಎಂದುಬಿಟ್ಟಳು.

ಮಾಸ್ತರು ಒಂದೇ ಉಸಿರಿಗೆ ಹೇಳುತಿದ್ದರು "ಇನ್ನೂ ನಸುಕಿನಲ್ಲಿ ಏಳಬೇಕು ಸೀತೂ ! ಓಡಿ ಓಡಿ ಮೈ ಬೆವರು ಹರಿಯಬೇಕು. ಎಣ್ಣೆ-ತುಪ್ಪ ತಿನ್ನಬೇಡ. ದಿನಾಲು ತಪ್ಪದಂತೆ ಅಭ್ಯಾಸ ಮಾಡು. ಮೇಲಂಗಿ ತೆಗೆದು ಓಡು. ಸೂರ್ಯ ನಮಸ್ಕಾರ ತಪ್ಪದೆ ಮಾಡು. ಮೈ ಮುರಿದು

ವ್ಯಾಯಾಮ ಮಾಡದಿದ್ದರೆ ಆಗುವುದಿಲ್ಲ ಸೀತೂ. ನೀನು ಚಿನ್ನದಂತಹ ಹುಡುಗ. ದೇಶಕ್ಕೆ ಚಿನ್ನ ತರಬೇಕು. ನೀನು ಮನಸ್ಸು ಮಾಡಿದರೆ ನಿಮ್ಮ ಬಡತನ ಚಿಟಿಕೆ ಹಾಕಿದಂತೆ ಮಾಯವಾಗುತ್ತದೆ. ಚೆನ್ನಾಗಿ ತಯಾರಾಗು. ನಾನೂ ನೀನು ಕೂಡಿಯೇ ಒಲಂಪಿಕ್ಸ್‌ಗೆ ಹೋಗೋಣ ಆಯಿತೇ ?"

ಮಾಸ್ತರು ಅಷ್ಟಕ್ಕೇ ಮುಗಿಸಲಿಲ್ಲ. ಇನ್ನೂ ಹೇಳುತ್ತಲೇ ಇದ್ದಾರೆ, ಅವರು ಏನೇನು ಹೇಳಿದರೋ ಇವನು ಏನೇನುಕೇಳಿದನೋ ದೇವರಿಗೆ ಗೊತ್ತು, ಮನಸ್ಸೆಲ್ಲ ಮುಜುಗರ. ಒಡಲಲ್ಲಿ ಸಂಕಟ. ಹೇಳಲಾರ ; ಅನುಭವಿಸಲಾರ.

ಮನೆಯಲ್ಲಿ ಅಪ್ಪ ಅಮ್ಮನ ಕಾಟ. ಬೆಳಗಿನ ಝಾವ ಎದ್ದು ವ್ಯಾಯಾಮ. ಮೈಲಿಗಟ್ಟಲೆ ಓಟ. ಶ್ರಮಸಾಧನೆ ಪ್ರಾಣ ಹಿಂಡುವಷ್ಟು ಹಿಂಸ್ರಕ. ಹುಡುಗ ಉಷ್...ಬುಷ್ ಎಂದರೂ ಗಮನಿಸುವವರಿಲ್ಲ. ಭೀಮಣ್ಣ ಮಾಸ್ತರು ಹೃದಯ ಹೀನ. ಅಪ್ಪ ಅಮ್ಮನಿಗೆ ಚಿನ್ನದ ಗೀಳು. ಮುಖ್ಯೋಪಾಧ್ಯಾಯರಿಗೆ ತಮ್ಮ ಶಾಲೆಯಿಂದ ಯಾರಾದರೊಬ್ಬ ಛಾಂಪಿಯನ್-ನನ್ನು ತಯಾರಿಸಿ ಕೀರ್ತಿ ಸಂಪಾದಿಸಬೇಕು ಎಂಬ ವಿಚಾರದ್ರವ್ಯ ಹೇಗೋ ತಲೆಯನ್ನು ಹೊಕ್ಕಿಬಿಟ್ಟಿತ್ತು. ಅಂದಮೇಲೆ, ಅವರು ಎದುರಾದಾಗಲೆಲ್ಲ "ಏನಯ್ಯಾ, ಹೇಗಿದ್ದೀ? ವ್ಯಾಯಾಮ ಮಾಡುತ್ತೀ ತಾನೇ? ಹೇಗಿದೆ ನಿನ್ನ ಪ್ರೋಗ್ರೆಸ್ ?" ಎಂದೆಲ್ಲಾ ಪ್ರಶ್ನೆಗಳನ್ನು ಮುಂದಿಡುವವರೇ.

ಅವರಿಗೆ ಏನೆನ್ನಬೇಕೋ ತಿಳಿಯದೆ "ಪರವಾಗಿಲ್ಲ ಸರ್, ಅಭ್ಯಾಸ ಮಾಡುತ್ತಿರುವೆ ಎನ್ನುತಿದ್ದ, ತಲೆಬಾಗಿಸಿಕೊಂಡು ಸೀತಾರಾಂ.

"ಸೀತೂ? ನೀನು ಭಾರತಕ್ಕೆ ಚಿನ್ನ ತರುವ ಚಿನ್ನದ ಹುಡುಗನಾಗಬೇಕು ತಿಳಿಯಿತೇ? ಹುಡುಗಿಯರು ಚಿನ್ನ ತರುತ್ತಾರೆ. ನೀನು ಚಿನ್ನದಂತ ಹುಡುಗ. ನಮ್ಮ ಶಾಲೆಗೆ ಕೀರ್ತಿತರಬೇಕು. ಈಗ ಆಡು ; ಮುಂದೆ ನೋಡು !"

ಆ ವಾಣಿ ಕಿವಿಯಲ್ಲಿ ಮೊರೆಯುತ್ತಲೇ ಇರುತ್ತದೆ. ಬೇಕೋ, ಬೇಡವೋ 'ಹೂಂ' ಎನ್ನಲೇ ಬೇಕು...! ತಕ್ಷಣವೇ ಅಲ್ಲಿಂದ ಕಾಲು ಕೀಳುತ್ತಾನೆ ಸೀತಾರಾಮ್,

ಆದರೆ...ಹುಡುಗನಿಗೆ ಅದರಲ್ಲಿ ಕಿಂಚಿತ್ತೂ ಆಸಕ್ತಿಯಿಲ್ಲ. ಅವನಿಗೆ ಇಷ್ಟವಾದ ಆಟವೆಂದರೆ ರಸ್ತೆ ಬದಿಯಲ್ಲಿ ಆಡುವ ಗೋಲಿ ಮತ್ತು ಕುಂಟೆಬಿಲ್ಲೆ ಇಂತಹವೇ. ಬೀದಿ ನಾಟಕ-ಸಿನೆಮಾ ಇವೇ ಅವನಿಗಿದ್ದ ಮೋಜು. ಇಂಥ ಆಟಂಗುಳಿಗೆ ಭೀಮಣ್ಣ ಮಾಸ್ತರ ಅಭಿಲಾಷೆ ಕೊರಳಿಗೆ ಉರುಳು,...ಉರುಳೇ ಉರುಳು.

ಒಮ್ಮೆ ಬಾಯಿ ಬಿಟ್ಟು ಹೇಳಿಯೇ ಬಿಟ್ಟ "ನನ್ನ ಕೈಲಿ ಇದೆಲ್ಲ ಆಗೋಲ್ಲ ಸರ್. ನೀವು ಯಾರಿಗಾದರೂ ಕೋಚ್ ಆಗಿ ಸರ್. ಹುಡುಗರಿಗೇನು ಕೊರತೆ ಬೇಕಾದಷ್ಟು ಮಂದಿ ಇದ್ದಾರೆ ಶಾಲೆಯಲ್ಲಿ."

"ಅಯ್ಯೋ, ಬಿಡಯ್ಯ! ಎಲ್ಲರೂ ನರಪೇತಲ ನಾರಾಯಣರೇ. ನೀನೊಬ್ಬ ಸರಿಯಾದ ದೇಹ ದಾರ್ಢ್ಯತೆ ಹೊಂದಿದ್ದೀ. ಸ್ವಲ್ಪದಿನ ಹೊಂದಿಕೊಳ್ಳುವುದು ಕಷ್ಟ ಅನಂತರ ನೋಡು !"

ತನ್ನ ಹಿಂದೇಟಿನಿಂದ ಒಮ್ಮೆ ತಂದೆಯಿಂದ ಏಟೂ ತಿಂದಿದ್ದ. ಮಾಸ್ತರ ಸಹಸ್ರನಾಮವೂ ಆಗಿತ್ತು. ಮೈ ಕೈ ಸಂದು ಸಂದುಗಳೆಲ್ಲಾ ನೋವಿನಿಂದ 'ಸತ್ತೇ' ಎಂದು

ಘೀಳಿಡುತಿದ್ದರೂ ಆ ಹೃದಯ ಹೀನ ಪಿ.ಟಿ. ಮಾಸ್ತರು "Go on! Go on!" ಎನ್ನುತಿದ್ದರು. ಹುಡುಗ ಹೇಗಾದರೂ ಇವರಿಂದ ನಾನೇ ಪಾರಾಗಬೇಕು ಎಂದು ತನ್ನಲ್ಲೇ ಯೋಚಿಸಿಕೊಂಡು, ತಕ್ಕ ಸಮಯಕ್ಕಾಗಿ ಹೊಂಚು ಹಾಕುತಿದ್ದ. ಮನಸ್ಸು ಚಡಪಡಿಸುತ್ತಿದ್ದರೆ ಜೀವ ತುಡಿಯುತಿತ್ತು. ಮನೆಯಲ್ಲಿ ಇರುವಂತಿಲ್ಲ; ಶಾಲೆಯಲ್ಲಿ ಕಲಿಯುವಂತಿಲ್ಲ. ಎಲ್ಲೋ ಶನಿಯಂತೆ ವಕ್ರಿಸಿ ಬಿಟ್ಟ ಭೀಮಣ್ಣ. ಮುಂದೇನು ಗತಿ? ಎಂದು ತನ್ನಲ್ಲಿ ಕೊರಗುತಿದ್ದಾಗಲೇ ತಟ್ಟನೆ ಒಂದು ಯೋಚನೆ ಹೊಳೆಯಿತು. ಈ ಊರನ್ನು ಬಿಟ್ಟು ಯಾವುದಾದರೊಂದು ನಗರಕ್ಕೆ ಹೋದರೆ ಹೇಗೆ?

ಆದರೆ...ದುಡ್ಡು?

ಆ ಪ್ರಶ್ನೆ ಎದ್ದಾಗ ತಲೆತಗ್ಗಿಸುವಂತಾಯಿತು ಹುಡುಗನಿಗೆ. ಸುಮ್ಮನೆ ಮನೆಯ ಕಡೆ ಹೆಜ್ಜೆ ಹಾಕಿದ. ದಾರಿಯಲ್ಲಿ ಎತ್ತಿನ ಗಾಡಿ ತುಂಬ ಕ್ಯಾಬೇಜ್ ತುಂಬಿಕೊಂಡು ಬಂದಿದ್ದ ಇಬ್ಬರು ಬೆಳೆಗಾರರಿಗೂ ಮಾರುಕಟ್ಟೆಯ ವರ್ತಕರಿಗೂ ಜಗಳ ನಡೆದಿತ್ತು. ಹಳ್ಳಿಗರ ಹಣವನ್ನು ಕಬಳಿಸುತಿದ್ದಾರೆ ವರ್ತಕರು. ತಪ್ಪು ತೂಕ. ತಪ್ಪು ಲೆಕ್ಕ.

ಸೀತಾರಾಂ ಅವರ ವಾದವಿವಾದವನ್ನು ಗಮನಿಸಿ ಹಳ್ಳಿಗರ ಪರವಾಗಿ ಅಂದ "ನೋಡಿ, ಅಣ್ಣಗಳಿರಾ! ಇನ್ನೊಮ್ಮೆ ತೂಕ ಮಾಡಿ ಬಿಡೋಣ. ಅದರ ಲೆಕ್ಕಾಚಾರ ನಾನು ಮಾಡಿಕೊಡುವೆ."

"ಆಗಲಿ ತಮ್ಮಾ! ಬಹಳ ಚಲೋ ಕೆಲಸ. ನಮ್ಮ ಪಾಲಿನ ದೇವರ್ಹಂಗೆ ಬಂದಿದ್ದಿ. ಏನೀ ಜನ! ನಮ್ಮ ಪ್ರಾಣವೇ ಹಿಂಡುತ್ತಾರು!"

ಹಳ್ಳಿಗರು ಕ್ಯಾಬೇಜನ್ನು ಮತ್ತೆ ತೂಗಿ ಬೆಲೆ ನಿರ್ಧರಿಸಿದಾಗ ಹಣ ಒಂದಕ್ಕೆರಡರಷ್ಟು ವೃದ್ಧಿಸಿತು. ಹಳ್ಳಿಗರು ಸಂತುಷ್ಟರಾದರು.

"ಈ ದಿನ ನಾವು ಇಲ್ಲೇ ಇರುವುದುಂಟು. ನಮಗೊಂದು ಒಳ್ಳೆ ಸಿನಿಮಾ ತೋರಿಸಪ್ಪಾ. ಅಂದರೆ ಇದರಿಂದ ನಿನಗೇನರೆ ಬೇಸರವುಂಟೆ ?"

"ಇಲ್ಲ. ಈ ಒಂದಿನ ಮಾತ್ರವಷ್ಟೆ ? ಸಿನಿಮಾ ನೋಡುವುದೆಂದರೆ ಮಧ್ಯಾಹ್ನದ ಮೇಲೆ. ಈಗ ಮುಂದಿನ ರಸ್ತೆಯಲ್ಲಿ ಬೀದಿ ನಾಟಕ ಉಂಟು. ನೋಡುತ್ತೀರೇನು?"

"ಹೇಂಗಿರುತ್ತೆ ಅದು ?"

"ಸುಮಾರಾಗಿರುತ್ತೆ."

"ಆದೀತು. ನಡೀ ಹೋಗಿ ಬರೋಣ ? ನೀನು ಜೊತೆಗಿದ್ದ ಮೇಲೇಕೆ ಭಯ ?"

ಹುಡುಗ ನಕ್ಕುಬಿಟ್ಟ. ಅವರು ಸೀತೂವನ್ನೂ ಕೂಡಿಸಿಕೊಂಡು ಗಾಡಿ ಹೊಡೆದರು. ಬಯಲು ನಾಟಕ ತುದಿ ಬುಡ ಅರ್ಥವಾಗದಿದ್ದರೂ ನಾಟಕ ಹಿಡಿಸಿತು ; ಅವರು ಸಂತುಷ್ಟರಾದರು. ಹುಡುಗ ಅವರೊಂದಿಗೆ ಊಟ ಮಾಡಿದ. ಮಧ್ಯಾಹ್ನದ ಸಿನೇಮವನ್ನೂ ತೋರಿಸಿದ್ದಾಯ್ತು.

"ನಾವು ಬೆಳಗಿನ ಝಾವ ಗಾಡಿಕಟ್ಟಿ ಊರಿಗೆ ಹೊರಡುವವರು. ನೀನು ನಮ್ಮೊಟ್ಟಿಗೆ ಬಂದರ ನಮ್ಮೂರು ನೋಡಬಹುದು. ನಾಡಿದ್ದು ಬೆಳಿಗ್ಗೆ ಬೆಂಗಳೂರಿಗೆ ಹೊರಡುವುದುಂಟು. ಅಲ್ಲಿಯೂ ಹೀಗೆ ಮೋಸವೇ ಮೋಸ !"

"ಆಗಲಿ, ನಿಮ್ಮೊಂದಿಗೆ ಬರುವೆ" ಎಂದ ಸೀತಾರಾಂ. ಸಧ್ಯಕ್ಕೆ ಅಲ್ಲಿಂದ ಅರುಗಾಗುವುದು ಬೇಕಾಗಿತ್ತು. ಹೊರಟೇಬಿಟ್ಟ. ಮತ್ತೆ ಅವರು ಎರಡು ಮೂರು ದಿನಗಳಲ್ಲಿ ಬೆಂಗಳೂರು ಮುಟ್ಟಿದಾಗ ತಾನೇ ಕ್ಯಾಬೇಜ್ ವ್ಯಾಪಾರಕ್ಕೆ ಮುಂದಾಗಿ ಹಣ ಲೆಕ್ಕಾಚಾರ ಸರಿಯಾಗಿ ಮಾಡಿಸಿ ಸೈ ಎನಿಸಿಕೊಂಡ.

ಅನಂತರ ನಗರ ಪರ್ಯಟಣ.

"ಇದೆಲ್ಲಾ ಏನೇನ್ ನೋಡಿ ಹೇಳ್ಲೇ ತಮ್ಮಾ !"

ಅವರು ಪ್ರತಿಯೊಂದನ್ನೂ ಕೇಳುತಿದ್ದರೆ ಏನೇನೂ ತಿಳಿಯದ ಇವನು ಮನಸ್ಸಿಗೆ ಬಂದುದನ್ನು ಹೇಳಿಬಿಡುತಿದ್ದ. ಅವರು ನಂಬಿ "ಹಾಂಗೇನ್ಲೇ ?" ಎನ್ನುತಿದ್ದರು.

ಅಲ್ಲಲ್ಲಿ ಸುತ್ತಿ ಟೌನ್‌ಹಾಲ್ ಬಳಿಗೆ ಬರುತ್ತಲೂ ಯಾರೋ ಮಾತಾಡಿಕೊಳ್ಳುತಿದ್ದರು. "ಇಂದು ಕರಗ. ವೀರ ಕುಮಾರರು ಕುಣಿಯುತ್ತಾರೆ ! ಭರ್ಜರಿಯಾಗಿರುತ್ತೆ ಮೆರವಣಿಗೆ."

ಅದನ್ನು ಕೇಳಿಸಿಕೊಳ್ಳುತ್ತಲೂ "ಕೇಳಿದ್ಯಾ ತಮ್ಮ ! ನಾವು ಒಳ್ಳೆ ಗಳಿಗೆಯಲ್ಲಿ ಇಲ್ಲಿಗೆ ಬಂದದ್ದು. ಕರಗ ಜಾತ್ರೆ ಕಣ್ತುಂಬ ನೋಡಿಯೇ ಹೋಗೋಣು. ಆಯ್ತೋ ?"

"ಆಗಲಿ, ಆಗಲಿ."

ಸೀತೂ ಒಪ್ಪಿಗೆ ಕೊಟ್ಟ. ಹಗಲಿಡೀ ಅನೇಕ ಬೀದಿಗಳನ್ನು ಅಲೆದರು ಚಿನ್ನಾಭರಣಗಳ ಅಂಗಡಿಗಳನ್ನೂ, ಭರ್ಜರಿ ವಸ್ತ್ರಗಳ ಅಂಗಡಿಗಳನ್ನೂ ನೋಡಿ ಕಕ್ಕಾಬಿಕ್ಕಿಯಾದರು. ಸಿನಿಮಾ ಮಂದಿರಗಳ ಕ್ಯೂ, ಹೋಟೆಲಿನ ತಿಂಡಿ ತೀರ್ಥಗಳ ವಾಸನೆ, ವೈನ್ ಅಂಗಡಿಗಳು, ಪಾದರಕ್ಷೆಗಳ ಬೃಹದ್

ಪ್ರದರ್ಶನ ಶಾಲೆಗಳು ಮುಂತಾಗಿ ನೋಡಿ ಪೂರೈಸಲಾರದ ಮಹಾ ನಗರಿ ಬೆಂಗಳೂರು !

ಮಧ್ಯರಾತ್ರಿ. ಗಂಟೆ ಹನ್ನೆರಡು,

ಧರ್ಮರಾಯನ ಗುಡಿಯಿಂದ ಹೊರಟಿತು ಕರಗ. ಜನ ಜನ. ಇಕ್ಕೆಡೆಗಳಲ್ಲೂ ಲಕ್ಷೋಪಲಕ್ಷ ಜನರಾಶಿ. ಕರಗ ಹೊರಬೀಳಲೂ ತಾವಿಲ್ಲದಷ್ಟು ತುಂಬಿ ಹೋಗಿದೆ ಜನಗಳ ದಂಡು. ನೋಡುತ್ತಾನೆ ! ಪಿ.ಟಿ. ಮಾಸ್ತರ್ ಭೀಮಣ್ಣ ಮಡದಿ ಮಕ್ಕಳೊಂದಿಗೆ ಜನಗಳ ಸಾಲಿನಲ್ಲಿದ್ದಾರೆ. ಇವನನ್ನು ನೋಡುತ್ತಲೂ "ಓ...! ನೀನು ಬಂದ್ಯೇನೋ !" ಎಂದರು ಭೀಮಣ್ಣ.

ಆ ಕ್ಷಣವೇ ಜಂಘಾಬಲವೇ ಬಿದ್ದುಹೋದಂತಾಯಿತು ಸೀತಾರಾಮನಿಗೆ. ಆ ಕ್ಷಣವೇ ಅಲ್ಲಿಂದ ಓಟ ಕಿತ್ತ. ಜೊತೆಗೆ ವ್ಯಾಪಾರಿಗಳ ಹಣದ ಚೀಲ ! ಓಡಿಯೇ ಓಡಿದ. ಪೋಲೀಸರ ಕಣ್ ತಪ್ಪಿಸಿ ; ವ್ಯಾಪಾರಿಗಳ ಕಣ್ ತಪ್ಪಿಸಿ.

ಸ್ವಲ್ಪ ಹೊತ್ತಿನಲ್ಲೇ ಹುಡುಗ ಓಡಿದುದರ ಅರಿವು ಮೂಡಿದ ವ್ಯಾಪಾರಿಗಳು ಲಬೋ ಲಬೋ ಎಂದು ಬಾಯಿ ಬಡಿದುಕೊಳ್ಳುತ್ತ "ನಮ್ಮ ಹಣ ಹೋಯಿತಲ್ಲೋ! ಎಂದು ಕೂಗಿಕೊಳ್ಳುತ್ತಲೂ ಓಡಿಹೋದ ಕಳ್ಳನ ಕಡೆಗೆ ಅನೇಕರ ದೃಷ್ಟಿ ಹರಿಯಿತು. ಪೋಲೀಸರು ಚುರುಕಾದರು. ಹುಡುಗ ಓಡಿಯೇ ಓಡಿದ. ಮತ್ತೂ ಓಡಿದ.

"ಅಲೆಲೆ ! ಈ ಹುಡುಗನನ್ನು ಭಾರತ ಟೀಮಿಗೆ ಸೇರಿಸಿದ್ದಿದ್ದರೆ ಸೋಲುತಿತ್ತು ಎಲ್ಲಿ ? ನಿಜವಾದ ವ್ಯಕ್ತಿ ಶಕ್ತಿಯನ್ನು ಗುರುತಿಸದಿರುವುದೇ ಸೋಲಿಗೆ ಕಾರಣ !" ಯಾರೋ ಹುಡುಗನನ್ನು ನೋಡಿ ವ್ಯಾಖ್ಯಾನ ಮಾಡಿದರು.

ಪೋಲೀಸರೂ ವ್ಯಾಪಾರಿಗಳೂ ಓಡಿಯೋಡಿ ಹುಡುಗನನ್ನು ಹಿಂಬಾಲಿಸಿ ಹೋಗಿ ಎಲ್ಲಿಯೋ ಯಾವುದೋ ಮೂಲೆಯಲ್ಲಿ ಹಿಡಿದರು.

ಹುಡುಗ ಅಳುತ್ತ ಅಂದ "ನಾನು ಕಳ್ಳನಲ್ಲ."

"ಮತ್ತ್ಯಾಕ್ಲೇ ಹಣದ ಗಂಟು ಹೊತ್ತು ಓಡಿದ್ದೀ ?"

"ಊ...ಊ...ನನಗೆ ಭಯ ಆಯ್ತು."

"ಏಕೆ ಏನಾಯ್ತು ?"

"ಮಾಸ್ತರನ್ನು ಕಂಡೆ. ಪೋಲೀಸೋರ್ನ ಕಂಡೆ. ಅಪ್ಪ ದೂರು ಕೊಟ್ಟಿರಬಹುದು ಎಂದುಕೊಂಡೆ. ಕೈಯಲ್ಲಿ ಹಣ ಇದ್ದದ್ದು ಮರೆತು ಹೋಯ್ತು. ಓಡಿಬಿಟ್ಟೆ."

ಆಗಲೇ ಭೀಮಣ್ಣ ಮಾಸ್ತರು ಎದುರಾಗಿ "ನೀನಾಗಲೇ ಓಟದಲ್ಲಿ ಆದಷ್ಟು ತಯಾರಾಗಿದ್ದಿ. ಮುಂದೆ ಹೆಚ್ಚಿನ ಭಂಗವಿಲ್ಲ ?"

ಹುಡುಗ ತಲೆಬಾಗಿದ. ಒಲಂಪಿಕ್ಸ್ ಓಟದ ದೂರ ಕಣ್ಮುಂದೆ ಸುಳಿದಳಿಯಿತು.

(ಸಾಧಾರ)

—o—

ನಡೆದಂತೆ ನುಡಿಯುವುದು
ನುಡಿದಂತೆ ನಡೆಯುವುದು
ಸತ್ಯ ಮಾರ್ಗಕೆ ನಲ್ ಬಿತ್ತು.

—o—

ಫ್ಯೂಜಿಯೂನಿ

ಬಹಳ ಹಿಂದಿನ ಕಾಲದಲ್ಲಿ ಜಪಾನ್ ದೇಶವನ್ನು ಆಳುವ ರಾಜನಿದ್ದ. ಅವನ ಮಗ ಪ್ರಾಪ್ತ ವಯಸ್ಕನಾದುದರಿಂದ ಮದುವೆ ಮಾಡುವ ಯೋಚನೆ ಮೂಡಿತು. ಕನ್ಯೆ ದೇಶದಲ್ಲೇ ಅತ್ಯಂತ ಸುಂದರಿಯಾಗಿರಬೇಕೆಂಬ ಇಚ್ಛೆಯಿಂದ ದೇಶದ ಸೌಂದರ್ಯವತಿಯರ ಮೇಳ ನಡೆಸಿ ಉತ್ತಮ ಕನ್ಯೆಯನ್ನು ಆರಿಸುವುದೆಂದು ಮಗನಿಗೆ ತಿಳಿಸಿದ. ಆ ಮಾತಿಗೆ ಮಗನೂ ಒಪ್ಪಿಕೊಂಡ.

ಹಾಗೆಂದು ದೇಶದಲ್ಲಿ ಡಂಗೂರವನ್ನು ಸಾರಿಸಿದ್ದಾಯಿತು. ತಿಂಗಳ ನಂತರ ಒಂದು ಭಾನುವಾರ ಅರಮನೆಯ ಸಭಾಂಗಣದಲ್ಲಿ ಹುಡುಗಿಯರ ಮೇಳ ನಡೆಯಿತು. ಜೊತೆಗೆ ತಂದೆ ತಾಯಿಯರೂ ಬಂದಿದ್ದರು. ಅವರೆಲ್ಲಾ ಎಡಬಲಗಳಲ್ಲಿದ್ದ ಹಜಾರದಲ್ಲಿ ಕಾದಿದ್ದು ತಂತಮ್ಮ ಹುಡುಗಿಯರು ರಾಣಿಯಾಗಬಹುದೇನೋ ಎಂಬ ಆಸೆಯಿಂದ ಕಾದಿದ್ದರು. ಎಲ್ಲರ ಕಣ್ಣುಗಳಲ್ಲೂ ಆಸೆಯ ಬೆಳಕು ಮಿಂಚುತಿತ್ತು. ನೂರಾರು ಮಂದಿ ಹುಡುಗಿಯರು ಜರತಾರೀ ಉಡುಪು ತೊಟ್ಟು ಲಜ್ಜೆಯಿಂದ ಕೆಂಪು ತಳೆದಿದ್ದರೂ ವೈಯಾರದಿಂದ ಪ್ರದರ್ಶನ ನಡೆಸಿದರು.

ನೋಡಿದರೆ, ಎಲ್ಲರೂ ಸುಂದರಿಯರೇ. ಎಲ್ಲರೂ ಒಂದೇ ರೀತಿಯಲ್ಲಿ ತೋರುತಿದ್ದಾರೆ. ಲಕ್ಷ ದೀಪಗಳ ಮಾಲೆಯಲ್ಲಿ ವಜ್ರಾಭರಣಗಳು ಜಗಜಗಿಸುತ್ತಿವೆ. ಯಾರನ್ನು ಆರಿಸುವುದೋ ಬಿಡುವುದೋ ನಿರ್ಧರಿಸುವುದೇ ಕಷ್ಟ. ರಾಜನೇ ಸ್ವತಃ ಪರೀಕ್ಷಿಸಿದ. ಆದರೂ ಸಮಸ್ಯೆ ಬಗೆಹರಿಯಲಿಲ್ಲ. ಕೊನೆಗೆ ಅವರಲ್ಲಿ ಹತ್ತು ಮಂದಿಯನ್ನು ಮಾತ್ರ ಆರಿಸಿ, ಅವರನ್ನು ಇನ್ನೊಂದು ಮೇಳದಲ್ಲಿ ಸೇರಿಸಿದನಂತರ ಆರಿಸುವುದೆಂದು ನಿರ್ಧರಿಸಿದ.

ಉಳಿದವರೆಲ್ಲಾ ನಿರಾಶರಾಗಿ ಹಿಂದಿರುಗಿದರು. ಆ ಹತ್ತು ಮಂದಿಯಲ್ಲಿಯೂ ಆಶಂಕೆ-ಚಿಂತೆ. ಮುಂದಿನ ಮೇಳದ ಒಳಗಾಗಿ ತಂತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಸತತವಾಗಿ ಪ್ರಯತ್ನಿಸುತಿದ್ದರು. ಕೊನೆಗೊಮ್ಮೆ ಎರಡನೆ ಮೇಳ ಸಿದ್ಧವಾಯಿತು. ಎಲ್ಲರ ಮುಖಗಳಲ್ಲೂ ಆಸೆ-ಕಳವಳಗಳ ಸಂಮಿಶ್ರಣದ ಮುದ್ರೆಯಿತ್ತು. ಫ್ಯಾಜಿಯಾಮ ದೇವತೆಯನ್ನು ಮನದಲ್ಲಿ ಧ್ಯಾನಿಸುತ್ತ ತಮ್ಮ ತಮ್ಮ ವಿಜಯಕ್ಕಾಗಿ ಪ್ರಾರ್ಥಿಸಿಕೊಂಡರು.

ಸ್ವಲ್ಪ ಹೊತ್ತಿನೊಳಗಾಗಿ ರಾಜ ರಾಣಿಯರು ಸೊಸೆಯನ್ನು ಆರಿಸಲು ಮುಂದೆ ಬಂದರು. ಆ ಹತ್ತೂ ಹುಡುಗಿಯರನ್ನು ನೋಡಿ ನೋಡಿ ಕೊನೆಗೊಬ್ಬ ಹುಡುಗಿಯನ್ನು ಆರಿಸಿಕೊಂಡರು. ಅವಳನ್ನು ರತ್ನ ಪೀಠದ ಮೇಲೆ ಕುಳ್ಳಿರಿಸಿ ತಲೆಗೆ ವಜ್ರಖಚಿತ ಕಿರೀಟವನ್ನು ಇಟ್ಟು ಹರಸಿದರು. ಕೂಡಲೇ ಆ ಕನ್ಯೆ ಸುಖ ಮೂರ್ಛೆಯೊದಗಿ ಹಿಂದಕ್ಕೆ ವಾಲಿ ಪೀಠದ ಮೇಲೆ ಕುಸಿದಳು.

ದೊರೆ ಕೇಳಿದ "ಇದೇನು ? ಈಕೆಗೆ ಮೂರ್ಛೆ ರೋಗವೇ ?"

"ಇಲ್ಲ ಮಹಾಪ್ರಭೂ ! ಅವಳು ಆನಂದ-ಲಜ್ಜೆಗಳಿಂದ ಪಾಲಿದ್ದಾಳೆ. ಅವಳಿಗೆ ಯಾವ ರೋಗವೂ ಇಲ್ಲ. ಹುಡುಗಿ ತುಂಬ ಆರೋಗ್ಯವಂತೆ." ಒಡನೆ ಕೈ ಮುಗಿದು ಹೇಳಿಕೊಂಡ ತಂದೆ.

"ಅವಳು ಫ್ಯೂಜಿಯಾಮ ದೇವತೆಯ ಹರಕೆಯಿಂದ ಹುಟ್ಟಿದ ಮಗು. ಅನಾರೋಗ್ಯ ಎಂಬುದು ಖಂಡಿತ ಇಲ್ಲವೇ ಇಲ್ಲ." ದೈನ್ಯದಿಂದ ನುಡಿದಳು ತಾಯಿ.

"ಏಳು ! ಚಿಕ್ಕರಾಣಿ!" ದೊರೆ ಕೆನ್ನೆ ಮುಟ್ಟಿ ಮುಟ್ಟಿ ಅಲುಗಿಸಿ ಕರೆದ,

ಹುಡುಗಿಯಿಂದ ಉತ್ತರವಿಲ್ಲ.

ರಾಣಿ ಕರೆದಳು... "ಏಳು. ಏಳು ಚಿಕ್ಕ ರಾಣಿ !"

ಊಹೂಂ, ಅದಕ್ಕೂ ಉತ್ತರವಿಲ್ಲ.

ಅಲ್ಲಿ ನೆರೆದವರೊಂದಿಗೆ ಇನ್ನುಳಿದ ಒಂಭತ್ತು ಮಂದಿ ಕನ್ನೆಯರೂ ನೋಡುತ್ತಾ ಗೂಟದಂತೆ ನಿಂತಿದ್ದಾರೆ. ರಾಜಕುಮಾರನೂ ಬೆಪ್ಪಾಗಿ ನಿಂತಿದ್ದಾನೆ. ಇಡೀ ಸಭೆಯೇ ಆಚ್ಚರಿಯಿಂದ ದಂಗುಬಡಿದಂತೆ ನಿಂತು ನೋಡುತ್ತಿದೆ. ಹುಡುಗಿಯ ಹಣೆಯ ಮೇಲೆ ಬೆವರಿನ ಹನಿಗಳು ತುಂತುರು ತುಂತುರಾಗಿ ಮೂಡಿದುವು. ಮುಚ್ಚಿದ ಕಣ್ಣುಗಳು ತೆರೆಯಲಿಲ್ಲ.

ಫ್ಯೂಜಿಯಾಮ ದೇವತೆಯ ವರದಿಂದ ಹುಟ್ಟಿದವಳಿರುವುದರಿಂದ ಅದೃಷ್ಟದ ಹುಡುಗಿ ಇರಬಹುದೆಂಬ ನಂಬಿಕೆ ರಾಜಕುಮಾರನಿಗೆ. ಮೇಲಾಗಿ, ಆಕೆ ಅನುಪಮ ಸುಂದರಿ.

ರಾಣಿಯಾಗಲು ತಕ್ಕ ಕನ್ನೆಯಾಗಿದ್ದಾಳೆ ಎಂಬ ಆಸೆಯೂ ಕೂಡ. ಎಲ್ಲರೂ ಅವಳನ್ನು ಏಳಿಸಲು ಪ್ರಯತ್ನಿಸುವು ದನ್ನು ಮನಸ್ಸಿಟ್ಟು ನೋಡುತ್ತಲಿದ್ದರು. ಆದರೆ, ರಾಜನ ಕೋಪ ಕೆರಳಿ ನೆತ್ತಿಗೇರಿತು. ಅವನು ಸಿಟ್ಟಿನಿಂದ ಉಚ್ಚ ದನಿಯಲ್ಲಿ ಚೀರಿದ "ಇದೆಲ್ಲಾ ಮೋಸ! ಮೂರ್ಛೆ ರೋಗದ ಹುಡುಗಿಯನ್ನು ಕರೆತಂದಿದ್ದೀರಿ! ನಿಮ್ಮನ್ನು ನಿಮ್ಮ ಹುಡುಗಿ ಯೊಂದಿಗೆ ಕಾರಾಗೃಹಕ್ಕೆ ತಳ್ಳುವುದು ಸರಿಯಾದ ಕ್ರಮ !"

ಆ ಮಾತಿಗೆ ತಂದೆ ತಾಯಿಗಳು ನಡುಗಿ ಹೋದರು. ಮೈನೆತ್ತರು ಹೆಪ್ಪುಗಟ್ಟಿದಂತೆ ಮುಖಬಿಂಬಗಳು ಕಪ್ಪು ತಳೆ ದುವು. ಒಡನೆ ಇಬ್ಬರೂ ಕೈ ಜೋಡಿಸಿಕೊಂಡು ಹೇಳಿ ಕೊಂಡರು.

"ಸ್ವಾಮಿ ! ಇದು ಆನಂದದ ಸುಖಮೂರ್ಛೆ ! ದಯವಿಟ್ಟು ಕೋಪಗೊಳ್ಳಬಾರದು. ಹುಡುಗಿ ಇಷ್ಟರ ಲ್ಲಿಯೇ ಎಚ್ಚರಗೊಳ್ಳುತ್ತಾಳೆ. ಅವಳಿಂದಲೇ ವಿಷಯ ತಿಳಿದುಕೊಳ್ಳಿ !"

ರಾಜ ಥೂತ್ಕರಿಸಿ ಮಾತಾಡಿದ. ಸಿಟ್ಟಿನಿಂದ ಕಣ್ಣು ಗಳು ಕಿಡಿಗಳನ್ನು ಸಿಡಿಸಿದುವು.

"ಮಗಳೇ ! ಫ್ಯೂಜಿಯಾನಿ. ಏಳಮ್ಮಾ !" ತಾಯಿ ಕರೆದಳು, ಕೂಗಿ.

ಆ ಕೂಡಲೇ ಹುಡುಗಿ ಎಚ್ಚರಗೊಂಡಳು. ಎಲ್ಲರೂ ತನ್ನನ್ನು ಸುತ್ತುವರಿದು ನಿಂತಿದ್ದ ದೃಶ್ಯದಿಂದ ತುಂಬ ಲಜ್ಜೆ ಯಿಂದ ಮುಖವನ್ನು ಎರಡೂ ಕೈಗಳಿಂದ ಮುಖ ಮುಚ್ಚಿ ಕೊಂಡಳು.

ದೊರೆ ಕೇಳಿದ "ಎಷ್ಟು ದಿನಗಳಿಂದ ನಿನಗೆ ಮೂರ್ಛೆ ಬರುತ್ತಿದೆ ?"

"ಇದೇ ಮೊದಲು ಹೀಗಾದುದು."

"ಮೂರ್ಛೆಯಲ್ಲಿ ನಿನಗೆ ಹೇಗೆನಿಸಿತು ? ನಿದ್ದೆಯೋ ಅಥವಾ...?"

"ಫ್ಯೂಜಿಯಾಮ ದೇವತೆಯ ತೊಡೆಯ ಮೇಲೆ ಮಲಗಿದ್ದೆ."

"ನಿಜವಾಗಿ ?"

"ಹೌದು ಪ್ರಭುವೇ ! ಶಿನ್‌ಫ್ಯೂಜಿ, ಕೋಫ್ಯೂಜಿ, ಕೋಮಿಟಾಕೆಗಳು ಭುಗಿಲೇಳಲು ಸಿದ್ಧವಾಗಿ ಹೊಗೆ ಕಾರುತಿದ್ದುವು !"

ಆಗ ತಂದೆ ತಾಯಿಗಳು ಅತೀ ದೈನ್ಯತೆಯಿಂದ ಹೇಳಿಕೊಂಡರು. "ಫ್ಯೂಜಿಯಾಮ ದೇವತೆಯ ವರದಿಂದ ಹುಟ್ಟಿದ ಮಗಳನ್ನು ನೀವು ದಯವಿಟ್ಟು ನೋಯಿಸಬಾರದು. ಶಿನ್‌ಫ್ಯೂಜಿ, ಕೋಫ್ಯೂಜಿ, ಕೋಮಿಟಾಕೆಗಳು ಹೊಗೆ ಕಾರಿದುವು ಎಂದರೆ ಬೆಂಕಿ ಕಾರಿ ದೇಶವನ್ನೇ ಸುಟ್ಟು ಬಿಟ್ಟಾವು ! ಸ್ವಾಮಿ ದಯಮಾಡಿ ಮನ್ನಿಸಿರಿ,"

ಆಗ ಫ್ಯೂಜಿಯಾನಿ ಎದ್ದುನಿಂತು ದೊರೆಗೆ ನಮಸ್ಕರಿಸಿದಳು.

ದೊರೆಗೆ ರೋಗದ ಹುಡುಗಿ ಎಂಬ ಅಸಮಾಧಾನವಿದ್ದರೂ ಅವಳ ಹೇಳಿಕೆಯಿಂದ ಹೆದರಿ ಒಪ್ಪಿಕೊಂಡು ನುಡಿದ "ಚಿಕ್ಕರಾಣಿ ! ಫ್ಯೂಜಿಯಾನಿ ! ನಿನ್ನನ್ನು ಫ್ಯೂಜಿಯಾಮ ದೇವತೆಯ ಮಗಳೆಂದು ಸ್ವೀಕರಿಸಿದ್ದೇವೆ !"

ಆ ಕೂಡಲೆ ಹರ್ಷಘೋಷಣೆಯೊಂದಿಗೆ ಚಪ್ಪಾಳೆಯ ಸುರಿಮಳೆಯಾಯಿತು. ರಾಜಕುಮಾರ ಅವಳ ಬೆರಳಿಗೆ ವಜ್ರದ ಉಂಗುರವನ್ನಿಟ್ಟು ಕೆನ್ನೆಗಳಿಗೆ ಹೂ ಮುತ್ತನೊತ್ತಿ ಕೈಯೆತ್ತಿ ಹಿಡಿದು ಸಭೆಗೆ ತೋರಿದ.

ಪ್ಯೂಜಿಯಾನಿ ಆನಂದಿತಳಾದಳು. ಮತ್ತೆ ಮೂರ್ಛೆ ಹೋಗಲಿಲ್ಲ.

—o—

ಹೆಣ್ಣು ಮಕ್ಕಳೆ
ನೀವೆಲ್ಲರು ಬನ್ನಿ.
ಗಂಡು ಮಕ್ಕಳೆ
ನೀವೆಲ್ಲರು ಬನ್ನಿ.

ನಿಮ್ಮ ನಿಮ್ಮಗಳ
ಸುಖ ಸಂಜೀವನವ
ತೊಳಗಿ ಬೆಳಗಲು
ಆವ ಕ್ಷೇತ್ರವು
ಬೇಕು ನಿಮಗೆಂದು
ಅರಿತರಿತು ನುರಿತು

ಆಯ್ದು ಕೊಳ್ಳಿರೈ
ಈಗಿಂದೀಗಲೆ
ವರ ಸರಸತೀ
ಆಲಯದಲ್ಲಿ.

— o —

ದೂರ ಪ್ರಾಂತ್ಯದಲ್ಲಿ

ನನ್ನ ಮುದ್ದು ಮಗುವೇ,

ನಾನು ಇಷ್ಟು ದೂರ ಬಂದೇನೆಂಬ ವಿಚಾರ ನನ್ನ ಮನಸ್ಸಿಗೆ ಎಂದೂ ಬಂದಿರಲಿಲ್ಲ. ಅಲ್ಲದೆ ಭಾರತದ ನೆಲವನ್ನು ಬಿಡುವಾಗ ಬಹಳ ಸಂಕಟವಾಯಿತು. ಇಪ್ಪತ್ತು ಸಾವಿರ ಸೈನಿಕರಿದ್ದ ದೊಡ್ಡ ದಂಡು ಸಾಲಾಗಿ ಭಾರತ ಭೂಮಿಗೆ ಅಡ್ಡಬಿದ್ದು ಮುತ್ತಿಟ್ಟು ಮೃತ್ತಿಕೆಯ ಹುಡಿಯನ್ನು ಶಿರದಲ್ಲಿ ಧರಿಸಿದ ಸಂದರ್ಭವನ್ನು ನೆನೆಸಿಕೊಂಡರೆ ಈಗಲೂ ಕಣ್ಣಿನಲ್ಲಿ ಕಂಬನಿಗಳು ಮೂಡುತ್ತವೆ. ನಾನು ಸೈನಿಕ. ನನ್ನ ದೇಶದ ಹಿಡಿಮಣ್ಣಿಗಾಗಿ, ಇಂಚು ನೆಲಕ್ಕಾಗಿ ಹೋರಾಡುವುದು ನನ್ನ ಪಣ ಮತ್ತು ಕರ್ತವ್ಯ. ಆದರೆ, ನಮ್ಮನ್ನು ಆಫ್ರಿಕ ಖಂಡದ ಈ ಪ್ರಾಂತ್ಯಕ್ಕೆ ಕರೆತಂದುದು ನಿಜಕ್ಕೂ ದುಃಖ-ಸಂಕಟ. ನಾವೀಗ ಹೋರಾಡಬೇಕಾದುದು ಆಫ್ರಿಕನ್ನರಿಗಾಗಿ.

ಆದರೇನು ?

ಹೆಜ್ಜೆ ಮುಂದಿಟ್ಟಾಗಿದೆ. ಇನ್ನು ಹಿಂದಿಡುವಂತಿಲ್ಲ. ಇಲ್ಲಿಗೆ ಬಂದಾಕ್ಷಣ ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾಯಿತು.

ಕಾಂಗೋ ಎಂದರೆ ದೀರ್ಘ ಕುಂಭಕರ್ಣ ನಿದ್ರೆಯಿಂದ ಎದ್ದೇಳುತ್ತಿರುವ ಆಫ್ರಿಕ ಖಂಡದ ಒಂದು ರಾಜ್ಯ. ಕಾಂಗೋ ರಾಜ್ಯ ಕರ್ಣಾಟಕ ರಾಜ್ಯದಷ್ಟು ದೊಡ್ಡದು ಎಂದುಕೊಂಡರೆ ತಪ್ಪಾಗುತ್ತದೆ. ಸವಿಸ್ತಾರದಲ್ಲಿ ಹಿಂದೂಸ್ಥಾನಕ್ಕೆ ಸಮನಾಗುತ್ತದೆ. ಜನಸಂಖ್ಯೆ ಒಂದು ಕೋಟಿಗೂ ಮೀರಿದೆ. ಆರು ದಶಕಗಳ ಹಿಂದೆ ಎರಡು ಕೋಟಿ ಜನಸಂಖ್ಯೆ ಇತ್ತೆಂದು ತಿಳಿದುಬರುತ್ತದೆ. ಬೆಲ್ಜಿಯಂ ಸಾಮ್ರಾಜ್ಯವಾದಿಗಳ ಶೋಷಣೆಯಿಂದ ಆಫ್ರಿಕನರ ಜೀವನ ನಿಕೃಷ್ಟಗತಿಗಿಳಿದು ಹುಟ್ಟಿಗಿಂತಲೂ ಸಾವು ಹೆಚ್ಚಿ ಜನಸಂಖ್ಯೆ ಇಳಿಯಿತು ಎಂದು ಹೇಳುತ್ತಾರೆ. ಆಳುತಿದ್ದ ಬೆಲ್ಜಿಯಂಗಿಂತ ಈ ಕಾಂಗೋ ರಾಜ್ಯ ಎಪ್ಪತ್ತೇಳು ಪಾಲಷ್ಟು ದೊಡ್ಡದು ಎಂದರೆ ಮಗನೇ, ನೀನು ನಂಬಲಾರೆ ಎನಿಸುತ್ತೆ ನನಗೆ !

ಈ ರಾಜ್ಯ ನನ್ನ ಪಾಲಿಗೆ ಹೊಚ್ಚ ಹೊಸ ಲೋಕ. ಸಂಸ್ಕೃತಿ-ಭಾಷೆ-ರೂಪುರೇಷೆಗಳು ನೈಸರ್ಗಿಕ ವಿಚಿತ್ರಗಳು ಒಂದೊಂದೂ ರೋಮಾಂಚನಗೊಳಿಸುವಂತಿವೆ. ವಿದ್ಯಾರ್ಥಿ ದೆಶೆಯಲ್ಲಿ ಚರಿತ್ರೆ ಭೂಗೋಳಗಳಲ್ಲಿ ನಾವು ಅರಿತ ವಿಚಾರ ನಿಜಕ್ಕೂ ನೀರಸ. ಈಗ ನೋಡಿದರೆ ಇವುಗಳಷ್ಟು ಸ್ವಾರಸ್ಯ ಇನ್ನೊಂದಿಲ್ಲ. ನಾವೆಷ್ಟು ಅರಿತರೂ ಸಾಲದು ; ಎಷ್ಟು ಕಲಿತರೂ ಮುಗಿಯದು. ಈ ರಾಜ್ಯದ ಮುಖ್ಯ ಪಟ್ಟಣ ಲಿಯೋಪಾಲ್ಡ್ ವಿಲ್. ಈ ಹೆಸರು ಹೇಗೆ ಬಂತು ಗೊತ್ತೇ ? ಬೆಲ್ಜಿಯಂ ದೊರೆ ಲಿಯೋಪಾಲ್ಡ್ ಕಾಂಗೋವನ್ನು ತನ್ನ ಖಾಸಗಿ ಸೊತ್ತಾಗಿ ಮಾಡಿಕೊಂಡಿದ್ದರಿಂದ. ಇಲ್ಲಿನ ಜನ ತಮ್ಮ ರಾಜಧಾನಿಯನ್ನು 'ಲಿಯೋ' ಎಂದು ಕರೆಯುವರು.

ಕಾಂಗೋ ರಾಜ್ಯ ಆರು ಪ್ರಾಂತ್ಯಗಳ ಒಕ್ಕೂಟ. ಅವುಗಳಲ್ಲೊಂದು ಕಟಾಂಗ. ತಾಮ್ರ, ವಜ್ರ, ಯುರೇನಿಯಂ ಗಣಿಗಳಿಂದ ಕೂಡಿದ ಸಂಪತ್ಸಮೃದ್ಧ ಪ್ರದೇಶ. ಇತಿಹಾಸದ ಅತೀವ ಒತ್ತಡಕ್ಕೆ ಸಿಕ್ಕಿ ಬೆಲ್ಜಿಯಂ ಅಧಿಕಾರ ಬಿಟ್ಟುಕೊಟ್ಟರೂ ಈ ಪ್ರಾಂತ್ಯವನ್ನು ಬಿಡಲಿಲ್ಲ. ಇದು ರಸ್ತೆಗಳನ್ನು ಹೊಂದಿಲ್ಲ. ರೈಲು ದಾರಿಯೂ ಚೂರುಪಾರು. ಪ್ರವಾಸಕ್ಕೆ ಕಾಂಗೋ ನದಿಯೇ ಗತಿ. ೨,೯೦೦ ಮೈಲುದ್ದದ ಪ್ರವಾಸ ನದಿಯ ಮೂಲಕವೇ. ಉಪನದಿಗಳನ್ನೂ ಪ್ರವಾಸಕ್ಕೆ ಬಳಸುತ್ತಾರೆ. ಕೆಲವು ಕಡೆ ಎಂಟು-ಹತ್ತು ಮೈಲಿಗಳಷ್ಟು ಅಗಲ ವಿಸ್ತಾರವಾಗಿದೆ ಈ ಕಾಂಗೋ ನದಿ. ನದಿಯಲ್ಲಿ ೪,೦೦೦ ದ್ವೀಪಗಳಿವೆಯಂತೆ! ರಾಜ್ಯದ ಬಹುಭಾಗವೆಲ್ಲಾ ಕಗ್ಗಾಡು. ವಿಮಾನದಲ್ಲಿ ಬರುತ್ತಾ ಭೂಮಿಯತ್ತ ಇಣಿಕಿನೋಡಿದರೆ ಹಸುರು ಸಮುದ್ರದಂತೆ ಕಾಣಿಸುತ್ತದೆ ಈ ಕಗ್ಗಾಡು. ಇನ್ನು ಜನರಾಶಿಯ ವಿಚಾರ ತೆಗೆದುಕೊಂಡರೆ, ನಾಲ್ಕಡಿ ಎತ್ತರದ ಪಿಗ್ಮಿಗಳು ಕೆಲವೆಡೆ ಇದ್ದಾರೆ. ಏಳಡಿ ಎತ್ತರದ ದೈತ್ಯರೂಪಿಗಳಿಗೂ ಕೊರತೆಯಿಲ್ಲ. ಕಪ್ಪು ವರ್ಣೀಯ ಕಟ್ಟುಮುಟ್ಟಾ ಕಟ್ಟಾಳುಗಳು! ಕಾಂಗೋದಲ್ಲಿ ಸುಮಾರು ಇನ್ನೂರರಷ್ಟು ಬೇರೆ ಬೇರೆ ಪಂಗಡಗಳ ಜನರಿದ್ದಾರೆಂದು ತಿಳಿದುಬರುತ್ತೆ. ಇಲ್ಲಿನ ಭಾಷೆಗಳ ಸಂಖ್ಯೆ ಮೂವತ್ತೆಂಟು! ಇವುಗಳಲ್ಲಿ ಲಂಗಾಲಾ ಭಾಷೆ ಹೆಚ್ಚು ಜನಪ್ರಿಯ. ಬಹುಶಃ ನಮ್ಮಲ್ಲಿ ಹಿಂದಿ ಇರುವಂತೆ. ಬಲುಬಾ ಪಂಗಡದ ಮುಖ್ಯಸ್ಥ ಹೇಗಿರಬಹುದು? ಅವನ ಜೀವನ ಸ್ಥಿತಿಯೇನು? ಎಂಬುದನ್ನು ನೀನು ಊಹಿಸಬಲ್ಲೆಯಾ? ಆತನ ದೈಹಿಕ ತೂಕ ೨೫೦ ಪೌಂಡುಗಳು!

ಅವನ ಪತ್ನಿಯರ ಸಂಖ್ಯೆಯೂ ೨೫೦ ! ಇಷ್ಟು ಮಾತ್ರ ವಲ್ಲ, ಇನ್ನೂ ಕೇಳು ! ಈ ದೇಶದಲ್ಲಿ ಮನುಷ್ಯರನ್ನು ಆಹಾರವಾಗಿ ಉಪಯೋಗಿಸುವುದೂ ಉಂಟು ! ಪಟ್ಟಣ ಗಳಲ್ಲಿ ವಿಜ್ಞಾನಪ್ರಜ್ಞೆಯುಳ್ಳ ನಾಗರಿಕರೂ ಇದ್ದಾರೆ. ಅಂದ ಮೇಲೆ ನಿನ್ನ ಪುಟ್ಟ ಮನಸ್ಸಿಗೆ ಯೋಚಿಸಿ ನೋಡಲು ಎಷ್ಟೊಂದು ವಿಚಾರಗಳು ! ನಾನು ಈ ವಿಚಾರಗಳನ್ನೆಲ್ಲಾ ನಿನಗಾಗಿಯೇ ಸಂಗ್ರಹಿಸಿರುವೆ.

ಈ ಪ್ರಾಂತ್ಯದಲ್ಲಿ ೪೫,೦೦೦ ಬೇರೆ ಬೇರೆ ಜಾತಿಯ ಹಕ್ಕಿಗಳು ಮತ್ತು ಹುಳಹುಪ್ಪಟೆಗಳೂ ಇವೆ ಎನ್ನುತ್ತಾರೆ. ನಮ್ಮ ಕ್ಯಾಂಪಿನ ಸುತ್ತಮುತ್ತ ದಟ್ಟವಾದ ಕಾಡಿರುವುದ ರಿಂದ ಹಕ್ಕಿಗಳ ದರ್ಶನ ಸುಲಭ. ಯಾವಾಗಲೂ ಚಿಲಿಪಿಲಿ ಗುಟ್ಟುವ ಅವುಗಳನ್ನು ಕಣ್ತುಂಬ ನೋಡುತ್ತಿದ್ದರೆ ಕೆಲವು ಬಗೆಯ ಹಕ್ಕಿಗಳು ಭಾರತದಿಂದ ಬಂದಿರಬೇಕು ಎನಿಸುತ್ತೆ ನನಗೆ.

ಇಲ್ಲಿ ದಟ್ಟವಾದ ಕಾಡುಗಳಿರುವುದರಿಂದ ವನ್ಯಮೃಗ ಗಳಿಗೆ ಕೊರತೆ ಇರುವುದಿಲ್ಲ. ಸಿಂಹ, ಹುಲಿ, ಆನೆ, ಚಿರತೆ, ಕಾಡುಕೋಣ, ಮೊಸಳೆ, ಘಟಸರ್ಪ ಮುಂತಾದುವುಗಳ ಮಹಾಸಂಗಮ. ಕರಿಯರಲ್ಲಿ ನಾಗರಿಕತೆ ಕಡಿಮೆ. ಯಾರಾ ದರೂ ಸತ್ತರೆ ಕಿವಿ ಗಡಚಿಕ್ಕುವ ಹಾಗೆ ಕೂಗಿ ರೋದಿಸುವ ಶೋಕ ಪ್ರದರ್ಶನ ಎರಡುಮೂರು ದಿನ ಎಡಬಿಡದೆ ನಡೆ ಯುತ್ತದೆ. ಅದು ರೂಢಿಯಲ್ಲಿರುವ ಪದ್ಧತಿ. ನಾವು ಆತ್ಮೀಯರಿಗೆ "ಹೋಗಿಬರ್ತೀರಾ ?" ಎಂದು ಬೀಳ್ಕೊಡು ವಂತೆ ಇವರು 'ಲೊಸಿಕಾ-ಬಿ' ಎನ್ನುತ್ತಾರೆ. ಬಿಳಿಯರ ಬಗ್ಗೆ ಇವರದೊಂದು ಆಡುಮಾತು ಕೌತುಕದ್ದು.

‘ಲೊಲಿಮಾ ಜೋಲಾ ಫೇಕಾ ಫೇಕಾ’ ಎಂದರೆ ಗೊತ್ತು ಗುರಿಯಿಲ್ಲದೆ ಹಾಡಾಡುವ ಬಾವಲಿ! ಎಂದರ್ಥ. ಈ ವಾಕ್ಯ ಆಗಾಗ ಕೇಳಿಬರುತ್ತದೆ.

ಹಿಂದೆ ಬಿಳಿಯರು ಇವರನ್ನು ಗುಲಾಮರನ್ನಾಗಿ ನಡೆಸಿಕೊಳ್ಳುತಿದ್ದ ಸಮಯದಲ್ಲಿ ದೇಶವಾಸಿಗಳು ಅವಿಧೇಯತೆ ತೋರಿದರೆ ಕೈಯನ್ನೋ ಕಾಲನ್ನೋ ಅಥವಾ ಎರಡೂ ಅಂಗಗಳನ್ನು ಕತ್ತರಿಸುತಿದ್ದರಂತೆ. ನಂತರ ಮೇಸ್ತ್ರಿಗಳು ಕತ್ತರಿಸಿದ ಅಂಗಗಳನ್ನು ಬುಟ್ಟಿಯಲ್ಲಿ ತುಂಬಿಟ್ಟುಕೊಂಡು ಬಿಳಿಯ ಬುದ್ಧಿಯವರಿಗೆ ಒಪ್ಪಿಸುತಿದ್ದರಂತೆ ! ಪ್ರಮಾಣ ಪತ್ರವನ್ನು ಒಪ್ಪಿಸುವ ಮಾದರಿಯಲ್ಲಿ. ಇದೆಲ್ಲಾ ಇಲ್ಲಿ ಸರ್ವೇಸಾಮಾನ್ಯ.

ಇಂಥಿಂಥ ರೂಢಿಬದ್ಧವಾದ ಎಲ್ಲಾ ವಿಚಾರಗಳನ್ನೂ ಬರೆಯುತ್ತೇನೆಂದರೆ ಅದೆಷ್ಟು ಸಾಹಿತ್ಯವಾದೀತೋ... ಮುಖ್ಯವಾಗಿ, ನನಗೆ ಸಮಯ ದೊರೆಯುವುದಿಲ್ಲ. ನಾವಿನ್ನೂ ದೇಶೀಯ ನೈಸರ್ಗಿಕ ರೂಪುರೇಷೆಗಳನ್ನು ತಿಳಿದುಕೊಳ್ಳುವುದರಲ್ಲಿಯೇ ಇರುವುದರಿಂದ ಕೈಗೊಂದಿಷ್ಟು ಬಿಡುವು ಎನ್ನಬಹುದು. ಮನಸ್ಸಿಗೂ ವಿರಾಮ. ರಣರಂಗಕ್ಕಿಳಿದ ಮೇಲೆ ಎಲ್ಲಕ್ಕೂ ಸಂಚಕಾರ.

ಈಗ ಮಧ್ಯರಾತ್ರಿ !

ಎಲ್ಲೋ ಒಮ್ಮೊಮ್ಮೆ ಕೂಗುವ ಗೂಬೆಗಳ ಗೂರಲ ಧ್ವನಿ ವಿನಾ ಸದ್ದೇ ಇಲ್ಲ. ಇನ್ನು ಮುಂದೆ ಇಂತಹ ಸಮಯ ಸಿಗುವುದು ದುರ್ಲಭ. ಇಂಥ ರಾಜ್ಯದ ಸ್ವಾತಂತ್ರ್ಯ ಸಾಧನೆಯ ಹೊಣೆ ಹೊತ್ತು ನಾವು ಇಲ್ಲಿಗೆ ಬಂದಿರುವುದು ವಿಶೇಷವೇ. ನಮ್ಮ ಹೊಣೆಗಾರಿಕೆ ಸಾಮಾನ್ಯವಲ್ಲ. ಜೀವನ್ಮರಣ

ಹೋರಾಟ. ಇದು ನಮ್ಮ ರಾಷ್ಟ್ರದ ಇಂಚು ಇಂಚು ನೆಲದ ಹೋರಾಟಕ್ಕಾಗಿ ಅಲ್ಲ! ಆಫ್ರಿಕನರಿಗಾಗಿ. ವಿಶ್ವಸಂಸ್ಥೆಯ ಉಜ್ವಲ ಬಾವುಟದಡಿಯಲ್ಲಿ ಇತರ ಹದಿನೆಂಟು ರಾಷ್ಟ್ರಗಳ ಸೈನಿಕರ ಸ್ನೇಹ ಶಿಬಿರದಲ್ಲಿ ನಾವಿದ್ದೇವೆ.

ಇಲ್ಲಿನ ನಾನಾಬಗೆಯ ಚಿತ್ರವಿಚಿತ್ರಗಳನ್ನು ನೋಡುತ್ತ ನಿನ್ನನ್ನು ನೆನಸುತ್ತಿರುವೆ. ಈ ಕಾಗದ ನಿನಗೆ ತಲುಪಲು ಎಷ್ಟು ಸಮಯ ತೆಗೆದುಕೊಳ್ಳುತ್ತೋ...ನಿನ್ನಿಂದ ಉತ್ತರ ಬರುವುದು ಇನ್ನಾವ ಕಾಲಕ್ಕೋ...ನಿಮ್ಮನ್ನು ಬಿಟ್ಟು ಬಂದು ಕೇವಲ ಒಂದೇ ತಿಂಗಳಾಗಿದ್ದರೂ ಯುಗವೊಂದು ಕಳೆದಷ್ಟು ದೀರ್ಘವಾಗಿ ತೋರುತ್ತಿದೆ. ಇರಲಿ. ಭಗವಂತ ಮುನ್ನಡೆಸುತಿದ್ದಾನೆ, ಎಲ್ಲಿಯವರೆಗೆ ನಡೆಸುತ್ತಾನೋ ಅಲ್ಲಿಯವರೆಗೆ ನಡೆಸಲಿ.

ನಿನ್ನ ಪ್ರೀತಿಯ ತಂದೆ
ಮನಮೋಹನ್ ಸೇನಿ
ಏಳನೇ ರೆಜಿಮೆಂಟನ
ಸೈನಿಕ

— o —

ನಿಮ್ಮ ಮನೆಗೊಂದು
ಇರಲೆಂದರೆ ದೆವ್ವ
ಓದು ವಿದ್ಯೆಗಳನು
ಬದಿಗಿಟ್ಟು ಬಾಳಿಗೆ
ನೀವಾಗಿರಿ ನಿತ್ಯವು
ದೊಡ್ಡ ದೊಡ್ಡ ದೆವ್ವ !

—o—

ಕೌಶಿಕನ ಗೊಂಬೆ

ಕೌಶಿಕ್ ತುಂಬ ಬುದ್ಧಿವಂತ. ಶಾಲೆ ತಪ್ಪಿಸುವುದಾಗಲೀ ಸುಳ್ಳು ಹೇಳುವುದಾಗಲೀ ಅವನಿಗೆ ಸೇರದು. ಶಾಲೆಯಲ್ಲಿ ಮಾಸ್ತರಿಗೆ ಅಚ್ಚುಮೆಚ್ಚು. ಪ್ರತಿ ತರಗತಿಯಲ್ಲಿಯೂ ಮುಂದೆ ನಿಲ್ಲುವ ಅವನಿಗೆ ವಿದ್ಯೆ ಸರಾಗ. ಮನೆಯಲ್ಲಿ ತಂದೆ ತಾಯಿಯರ ಪ್ರೀತಿಗೆ ಪಾತ್ರ. ತಾಯಿ ಪ್ರೀತಿಯಿಂದ 'ಕೌಶೀ ಕೌಶೀ' ಎಂದು ಕರೆಯುತ್ತಾಳೆ.

ಸಂಜೆ ಶಾಲೆಯಿಂದ ಬಂದ ಕೌಶಿಕ್ ತಾಯಿಯನ್ನು ಕೇಳಿದ "ಅಪ್ಪ ಬಂದರೇ ?"

"ಮಧ್ಯಾಹ್ನ ಬರಬೇಕಾಗಿತ್ತು. ಬರಲಿಲ್ಲ. ಬಹುಶಃ ನಾಳೆ ಬರಬಹುದು."

ಆ ನಾಳೆಗಾಗಿ ಕೌಶಿಕ್ ಕಾದಿದ್ದ. ಇರುಳು ಉರುಳಿತು. ಬೆಳಕು ಮೂಡಿತು. ಅದೃಷ್ಟಕ್ಕೆ ಅಂದು ಶಾಲೆಯಿರಲಿಲ್ಲ. ಮಧ್ಯಾಹ್ನ ಎರಡು ಗಂಟೆಗೆ ದೆಹಲಿಯಿಂದ ಪ್ಲೇನು ಬರುತ್ತದೆ. ಎರಡೂವರೆಗೆಲ್ಲಾ ಅಪ್ಪ ಮನೆಯಲ್ಲಿರಬೇಕು ಎಂಬುದು ಮನೋಗತ. ಮುಂಬಾಗಿಲು ಮುಚ್ಚಿತ್ತು. ಕೌಶಿಕ್ ಕಿಟಕಿಯಲ್ಲಿ ಮೊಗವಿಟ್ಟು ನೋಡುತ್ತಲಿದ್ದ. ಗಡಿ

ಯಾರದ ಮುಳ್ಳು ಎರಡು-ಮೂವತ್ತರ ಅಂಚನ್ನು ದಾಟಿತು. ಕ್ಷಣ ಕ್ಷಣಗಳು ಉರುಳಿ ಗಳಿಗೆ ಗಳಿಗೆಗಳು ಕಳೆದುವು. ಮುಳ್ಳು ಮೂರರ ಅಂಚನ್ನು ಮುಟ್ಟಿತು.

"ಓ ! ಅಪ್ಪ ಈವೊತ್ತೂ ಬರಲಿಲ್ಲ."

ಮಗನ ನಿರಾಸೆಯ ನುಡಿಗೆ ತಾಯಿ ಪ್ರತಿಕ್ರಿಯಿಸಿದಳು... "ಅನೇಕ ವೇಳೆ ಪ್ಲೇನ್‌ಗಳು ಹೊತ್ತು ಮೀರಿ ಬರುತ್ತವೆ,"

ಆ ತಕ್ಷಣ ಕೌಶಿಕ್ ರಸ್ತೆಯ ಕಡೆ ನೋಡಿದ. ನಿಜಕ್ಕೂ ಅಪ್ಪ ಆಟೋದಿಂದ ಇಳಿಯುತಿದ್ದ. ಕೂಡಲೇ ಬಾಗಿಲನ್ನು ತೆರೆದು ರಸ್ತೆಗೆ ಓಡಿದ ಕೌಶಿಕ್. ಅಪ್ಪ ದೆಹಲಿಗೆ ಹೋದಾಗಲೆಲ್ಲ ಏನಾದರೂ ತಂದೇ ತರುತ್ತಾನೆಂಬುದು ಗೊತ್ತು. ಅಪ್ಪನನ್ನು ನೋಡಿದ ಸಂತಸದೊಂದಿಗೆ ಆಟಿಕೆ ವಸ್ತುವಿನ ಆಸೆಯೂ ಮನದಲ್ಲಿ ತುಂಬಿತ್ತು.

ಸುರೇಶ್ ಒಳಬಂದವನೇ ಹೇಳಿದ "ನಿನಗೊಂದು ಅಪೂರ್ವ ವಸ್ತು ತಂದಿರುವೆ. ಏನೆಂಬುದನ್ನು ಊಹಿಸು ಕೌಶೀ !"

ಕೌಶಿಕ್ ಆನಂದ ತುಂದಿಲತೆಯಿಂದ ಎಲ್ಲ ಹಲ್ಲುಗಳನ್ನೂ ಪ್ರದರ್ಶನ ಮಾಡಿ ಅಂದ,

"ನನಗೊತ್ತು ನೀವು ಗೊಂಬೆ ತಂದಿದ್ದೀರಾ !"

"ನಿನಗೆ ಹೇಗೆ ಗೊತ್ತು ಕೌಶೀ ?"

"ಊಹೆ ಅಷ್ಟೆ."

"ನೀನು ಜಾಣಮರಿ."

ಸುರೇಶ್ ಪೆಟ್ಟಿಗೆಯಲ್ಲಿದ್ದ ಬೊಂಬೆಯನ್ನು ತೆಗೆದು ಕೊಟ್ಟ. ನೋಡಿದರೆ ಅದು ಸುಮಾರಾಗಿ ಎಲ್ಲಾ ಅಂಗಡಿ

ಗಳಲ್ಲೂ ಕಂಡುಬರುವಂತಹ ಸಾಧಾರಣ ಬೊಂಬೆಯಲ್ಲ. ಗಟ್ಟಿಮುಟ್ಟಾದ ಕಬ್ಬಿಣ ತಗಡಿನ ಹೊದಿಕೆಯನ್ನು ಹೊಂದಿದ ಬೊಂಬೆ. ಅದು ಅವನಿಗಿಂತ ಸ್ವಲ್ಪ ಮಾತ್ರ ಚಿಕ್ಕದು ಅಷ್ಟೆ. ಕಾಕಿ ಕೋಟು, ಕಾಕಿ ಪ್ಯಾಂಟ್ ಧರಿಸಿ, ತಲೆಗೆ ಹ್ಯಾಟ್, ಕಾಲಿಗೆ ಬೂಟು ಹಾಕಿಕೊಂಡು ಸಿಪಾಯಿಯಂತೆ ಕಾಣು ತಿತ್ತು. ಕೀ ಕೊಟ್ಟರೆ ನಡೆಯುತ್ತೆ. ಮಾತಾಡುವಂತೆ ಬಾಯಿ ಅಲುಗಿಸುತ್ತೆ. ಅದರ ಚಲನವಲನ ಜೀವಂತ ಮಗುವಿನಷ್ಟೇ ಸೂಕ್ಷ್ಮ. ಹುಡುಗ ಮುಗ್ಧ ಮೋಹಕತೆಯಿಂದ ಮಾರು ಹೋಗಿ ಬೊಂಬೆಯನ್ನು ಎದೆಗಪ್ಪಿಕೊಂಡು ಮುದ್ದಾಡಿದ. ಅದರ ಟೋಪಿಯ ಮೇಲೆ 'ಕರ್ನಲ್' ಎಂಬ ಹೆಸರಿತ್ತು. ಕರ್ನಲ್ ದರ್ಜೆಯ ಬಿರುದುಗಳ ಜೋಡಣೆ ಟೋಪಿ ಮತ್ತು ಕೋಟಿನಲ್ಲಿ.

ಸುರೇಶ್ ಮಗನ ಆನಂದವನ್ನು ನೋಡಿ ಸಂತಸ ದಿಂದ ವಿವರಿಸಿದ "ನೋಡು, ಇದು ಯಂತ್ರ ಮಾನವ ನಂತೆಯೇ ಕೆಲಸ ನಿರ್ವಹಿಸುತ್ತದೆ. ಅದರ ಚಾರ್ಟ್ ನೋಡಿ ಕೊಂಡು ಅದನ್ನು ಚಾಲೂ ಮಾಡು. ಅದರ ಬೆನ್ನಿನಲ್ಲಿ ಆರು ಗುಂಡಿಗಳಿವೆ. ಯಾವುದು ಬೇಕೋ ಅದನ್ನು ಒತ್ತಿ ನಿನ್ನ ಆಟಕ್ಕೆ ಉಪಯೋಗಿಸಿಕೊ. ಮನೆಯಲ್ಲಿ ನೀನೊಬ್ಬನೇ. ನಿನಗೀಗ ಜೊತೆಗಾರ ಸಿಕ್ಕಿದ."

ಹಗಲೆಲ್ಲಾ ಅದರೊಂದಿಗೇ ಹೊತ್ತು ಕಳೆದ ಕೌಶಿಕ್. ರಾತ್ರಿ ತನ್ನ ಹಾಸಿಗೆಯಲ್ಲಿಯೇ ಅದಕ್ಕೆ ಸ್ಥಳ ತೆರವು ಮಾಡಿದ. ಅದು ರಬ್ಬರ್ ಗೊಂಬೆಯಂತೆ ಮೃದುವಾದ

ಬೊಂಬೆಯಲ್ಲವಾದರೂ ಅದನ್ನು ತಬ್ಬಿ ಮಲಗಿದ. ಸ್ವಲ್ಪೇ ಹೊತ್ತಿನೊಳಗಾಗಿ ಗಾಢ ನಿದ್ದೆ. ಕರ್ನಲ್-ಗೂ ಅಷ್ಟೇ ನಿದ್ದೆ.

* * * *

ಅದೊಂದು ಬಯಲು ಪ್ರದೇಶ. ಕೌಶಿಕ್ ಕರ್ನಲ್ ಜೊತೆಯಲ್ಲಿ ನಡೆಯುತಿದ್ದಾನೆ. ಸ್ವಲ್ಪದೂರ ಹೋದನಂತರ ಕರ್ನಲ್ ಹೇಳಿದ "ನೋಡು, ನಾವಿಬ್ಬರೂ ಮನೆಯಲ್ಲಿ ಹೇಳದೆ ಬಂದಿದ್ದೇವೆ. ನಾವು ಆದಷ್ಟು ಜಾಗ್ರತೆಯಾಗಿ ಹಿಂದಿರುಗಬೇಕು."

"ಹೌದು, ಅಮ್ಮ ಹುಡುಕಾಡುತ್ತಾಳೆ."

"ನಾವು ಇಷ್ಟು ದೂರ ಬಂದಿದ್ದೇವೆ. ಇನ್ನು ಮಾಡಬೇಕಾದುದು ತುಂಬ ಇದೆ. ನೀನು ಬೇಗಬೇಗ ನಡೆ."

ಇಬ್ಬರೂ ಕೈಕೈ ಹಿಡಿದುಕೊಂಡು ನಡೆದರು. ಅಲ್ಲೆ ಬಯಲ ಮಧ್ಯೆ ಒಂದು ಚಿಕ್ಕ ರಾಕೆಟ್ ಕಂಡು ಬಂತು. ಸುವರ್ಣ ಬಣ್ಣದ ಅದು ಚೂಪಗೆ ಇದ್ದು ನಾಲ್ಕು ಕಡೆ ರೆಕ್ಕೆಗಳಂತಹ ಹಲಗೆಗಳಿದ್ದುವು. ಕರ್ನಲ್ ಅದರ ರೆಕ್ಕೆಯ ಬದಿಯಲ್ಲಿದ್ದ ಒಂದು ಗುಂಡಿಯನ್ನು ಅದುಮಿದ. ಕೂಡಲೇ ಬಾಗಿಲು ತೆಗೆದುಕೊಂಡು ಒಂದು ಏಣಿ ಹೊರ ಬಂದಿತು. ಕರ್ನಲ್ ಕೌಶಿಕನ ಕೈ ಹಿಡಿದುಕೊಂಡು ಮೆಟ್ಟಿಲುಗಳನ್ನು ಸರಸರ ಏರಿ ಒಳಗಿನ ಗುಂಡಿಯನ್ನು ಅದುಮಿದ. ಕೂಡಲೆ ಕದ ಮುಚ್ಚಿತು. ಏಣಿಯೂ ಒಳಸೇರಿಕೊಂಡಿತು. ಕರ್ನಲ್ ಕುರ್ಚಿಗಳಿಗೆ ಹೊಂದಿಕೊಂಡಿದ್ದ ಬೆಲ್ಟ್ ಬಿಡಿಸಿ ಕೌಶಿಕನನ್ನು ಕೂಡಿಸಿ ಬೆಲ್ಟ್ ಬಿಗಿದು ತಾನೂ ಬಿಗಿದುಕೊಂಡ. ಅನಂತರ ಮೇಲ್ಬದಿಯಲ್ಲಿದ್ದ ಕೆಂಪು ಗುಂಡಿಯನ್ನು ಒತ್ತಿದ. ಆ ಕೂಡಲೇ ಸರಸರ ಸದ್ದು ಮಾಡುತ್ತ ರಾಕೆಟ್ ಮೇಲೇರಿತು.

ಎಲ್ಲಿಗೆ, ಯಾವ ಕಡೆಗೆ ಹೋಗುತ್ತಿದೆಯೋ ತಿಳಿಯದು. ವೇಗ ಏರುಪೇರಿಲ್ಲದೆ ಒಂದೇಸಮನೆ ಸಾಗಿತು. ಎಷ್ಟೋ ಹೊತ್ತಿನ ಮೇಲೆ ಯಾವುದೋ ಸ್ಥಳದಲ್ಲಿ ಇಳಿದುದು ನೆಲ ಮುಟ್ಟಿದ ಸದ್ದಿನಿಂದ ತಿಳಿಯಿತು. ಕರ್ನಲ್ ತನ್ನ ಬೆಲ್ಟ್ ಗಳನ್ನು ಬಿಚ್ಚಿಕೊಂಡ ನಂತರ ಕೌಶಿಕನ ಬೆಲ್ಟ್‌ಗಳನ್ನೂ ಬಿಚ್ಚಿ ಹಸುರು ಗುಂಡಿಯನ್ನು ಅದುಮಿದ. ತಕ್ಕನೆ ಬಾಗಿಲು ತೆಗೆದುಕೊಂಡು ಏಣಿ ಹೊರಗಡೆ ಮೈ ಚಾಚಿತು. ಇಬ್ಬರೂ ಇಳಿದರು. ಕರ್ನಲ್-ಗಿದ್ದ ಧೈರ್ಯ ಕೌಶಿಕನಿಗಿರಲಿಲ್ಲ. ಅವನು ಭಯಭೀತ ಮುದ್ರೆಯಿಂದ ಸುತ್ತಲೂ ನೋಡಿದ. ಕರ್ನಲ್ ಎತ್ತರಕ್ಕೆ ಬೆಳೆದಂತೆ ತೋರಿತು. ಅವನನ್ನೆ ಬಿರಿ ಬಿರಿ ನೋಡುತ್ತ ಅಂದ "ನೀನು ತುಂಬ ಎತ್ತರ ಬೆಳೆದಿದ್ದಿ!"

"ಹಾಂ! ನೀನೂ ಅಷ್ಟೆ."

"ನಿಜವಾಗಿ?"

"ಹೌದು. ಅದಿರಲಿ, ಇಲ್ಲಿ ನೋಡು! ಈ ನೆಲದ ವಿಶೇಷ. ಇದು ಭೂಮಿಯಂತೆ ಗಟ್ಟಿ ನೆಲವಲ್ಲ. ಭಸ್ಮ ರಾಶಿಯಂತೆ ಧೂಳುಧೂಳಾದ ಬರೀ ಕೆಂಧೂಳು. ಇದು ಬೇರೊಂದು ಗ್ರಹ. ಈ ಭಾಗದಲ್ಲಿ ಕಲ್ಲಿನಂಶ ಇಲ್ಲ. ಮುಂದೆ ಮುಂದೆ ಹೋದರೆ ಗಟ್ಟಿ ಮಣ್ಣು-ಕಲ್ಲುಗಳನ್ನು ನೋಡಬಹುದು."

ಇಬ್ಬರೂ ಕೈಕೈ ಹಿಡಿದುಕೊಂಡೇ ಮುಂದೆ ನಡೆದರು. ಸ್ವಲ್ಪದೂರ ನಡೆದ ಮೇಲೆ ಬಂಡೆಗಲ್ಲುಗಳ ರಾಶಿ ಕಂಡಿತು. ನೆಲದ ಮೇಲೆಲ್ಲಾ ಗೋಲಿಗಳಂತಹ ದುಂಡು ದುಂಡು ಕಲ್ಲುಗಳು.

"ಇವುಗಳನ್ನು ತೆಗೆದುಕೊಳ್ಳಬಲ್ಲೆವಾದರೂ ದಕ್ಕಿಸಿ ಕೊಳ್ಳಲಾರೆವು. ಬೇಕಾದರೆ ನೀನು ಪ್ರಯತ್ನಿಸು."

ಕೌಶಿಕ್ ಕಲ್ಲುಗಳನ್ನು ತೆಗೆದುಕೊಂಡ. ಅವು ಜಾರಿ ಪುಡಿಪುಡಿಯಾಗಿ ಕೆಳಗೆ ಬಿದ್ದುವು.

"ಅದೇಕೆ ಹೀಗೆ ?"

"ಈ ಗ್ರಹದಲ್ಲಿ ಪ್ರಾಣವಾಯು ಇಲ್ಲವೇ ಇಲ್ಲ. ಅದಕ್ಕೇ ಪ್ರಾಣದೊಂದಿಗೆ ಸಹಕರಿಸುವುದಿಲ್ಲ ಪ್ರಕೃತಿ."

"ನಿನಗೆ ಹೇಗೆ ಗೊತ್ತು ? ನೀನು ಹಿಂದೆ ಎಂದಾದರೂ ಇಲ್ಲಿಗೆ ಬಂದಿದ್ದೆಯಾ ?"

"ಒಮ್ಮೆ ಬಂದುದುಂಟು, ಆಗ ಇಲ್ಲೆಲ್ಲಾ ಸುತ್ತಾಡಿ ಹೋಗಿರುವೆ !"

ಕೌಶಿಕ್ ಎವೆಯಿಕ್ಕದೆ ಸುತ್ತಲೂ ನೋಡಿದ. ಅಂತಹ ಸ್ಥಳವನ್ನು ಹಿಂದೆಂದೂ ಕಂಡೇ ಇರಲಿಲ್ಲ. ಗಿಡಮರಗಳಿಲ್ಲದ ಆಕಾಶಕಾಯದಂತೆ ಒಂದು ಭ್ರಾಮಕಲೋಕ.

"ಹೋಗೋಣ, ನಡೆ ಮುಂದೆ. ನಾನು ಇನ್ನೂ ಸೊಗಸಾದ ಸ್ಥಳವನ್ನು ತೋರುವೆ. ಹೇಗೂ ಬಂದಾಗಿದೆ. ನೋಡುವುದನ್ನೆಲ್ಲಾ ನೋಡಿಯೇ ಹಿಂದಿರುಗಬೇಕು."

ಕೌಶಿಕ್ ಮರುನುಡಿಯದೆ ಗೆಳೆಯನ ಕೈ ಹಿಡಿದು ಕೊಂಡು ಮುನ್ನಡೆದ. ದುಂಡು ದುಂಡು ಕಲ್ಲುಗಳು. ಕಾಲಿಟ್ಟಲ್ಲಿ ಅತ್ತಿತ್ತ ಉರುಳುವುದರಿಂದ ಬೀಳುವ ಸಂಭವ ಹೆಚ್ಚು. ಭಯದಿಂದ ಕರ್ನಲ್ ಕೈಯನ್ನು ಭದ್ರವಾಗಿ ಹಿಡಿದುಕೊಂಡು ಕೈಯಾಶ್ರಯದಲ್ಲಿಯೇ ನಡೆದ. ಇನ್ನೂ ಸ್ವಲ್ಪದೂರ ಸಾಗಿದ ಮೇಲೆ ಕಂಡದ್ದು ಮಂಜುಮಯ ಲೋಕ ! ಧವಳ ಶುಭ್ರ ಮಂಜು. ಬೆಳ್ಳಿಯ ಲೋಕ

ದಲ್ಲಿಯೇ ಇದ್ದಂತಹ ಅನುಭವ. ಮಂಜುಮಯವಾದರೂ ಚಳಿಯ ಗೋಜಿಲ್ಲ. ಮಂಜನ್ನು ಕೈಯಿಂದ ಮುಟ್ಟಬಹು ದೇನೋ ಎಂಬಷ್ಟು ಭ್ರಾಮಕ. ಆದರೆ ಅದು ಕೈಗೆ ಸಿಕ್ಕ ರಷ್ಟೆ? ಎರಡೂ ಕೈಗಳನ್ನು ನೀಡಿದ. ಮಂಜು ಸುತ್ತ ಮುತ್ತ ಸರಿದು ಹೋಗುತ್ತಲೇ ಇದೆ.

"ಕರ್ನಲ್, ನಾವಿಲ್ಲಿ ಸ್ಕೇಟಿಂಗ್ ಮಾಡಬಹು ದಲ್ಲವೇ ?"

"ಅನುಭವಸ್ಥರು ಮಾಡಬಹುದು. ನಿನ್ನಿಂದಾಗದು. ನೀನು ಜಾರಿದರೆ ಇನ್ನಾವುದೋ ಲೋಕಕ್ಕೆ ಹೋಗಿಬಿಡ ಬಹುದು ! ಆದ್ದರಿಂದ ಈಗ ಆ ಸಾಹಸ ಬೇಡ."

"ನಾವೀಗ ಹೋಗುವುದು ಎಲ್ಲಿಗೆ ?"

"ನಿನಗೆ ತೋರಿಸಬೇಕಾದುದು ಸ್ವರ್ಗದ ಸ್ವರ್ಣ ದ್ವಾರ. ಈ ಮಂಜುಮಯ ಪ್ರದೇಶವನ್ನು ದಾಟಿದರೆ ನಾವು ಕಾಣುವುದೇ ಅದು."

"ಆದರೆ, ಮುಂದೆ ಹಾದಿಯೇ ಕಾಣದಷ್ಟು ಮಂಜು. ಹೋಗುವುದಾದರೂ ಹೇಗೆ ?"

"ಅದೇ ಕಷ್ಟ."

"ಈಗ ಏನು ಮಾಡೋಣ ? ಮುಂದೆ ಹೋಗೋ ಣವೇ ? ಹಿಂದೆ ಹೋಗೋಣವೇ ?"

"ಹಿಂದೆ ನಾನು ಬಂದಾಗ ಮಂಜು ಇಷ್ಟು ದಟ್ಟ ವಾಗಿರಲಿಲ್ಲ. ಸುಖವಾಗಿ ಹೋಗಿ ಬಂದೆ. ಈ ಸಲ ಬಹಳ ಮಂಜು. ಹಾದಿ ತಪ್ಪಿದರೆ ಕಷ್ಟ. ಹಿಂದಿರುಗು ವುದು ಲೇಸು."

"ನಡೆ, ಹಾಗಾದರೆ..."

ಇಬ್ಬರೂ ಕೈಕೈ ಹಿಡಿದುಕೊಂಡು ಹಿಂದಿರುಗಿ ನಡೆಯ ತೊಡಗಿದರು. ಆಕಾಶಕಾಯದಲ್ಲಿ ನಕ್ಷತ್ರಗಳು ಜಗಜಗಿಸು ತ್ತಿವೆ. ರೇಖಾ ಚಂದ್ರಮ ಕಂಗೊಳಿಸುತಿದ್ದಾನೆ. ಹಾದಿ ಯಥೋಚಿತವಾಗಿ ಸಾಗುತ್ತಿದೆ. ದುಂಡು ಕಲ್ಲುಗಳು ಉರು ಳಾಡುತಿದ್ದರೂ ಜಾರಿ ಬೀಳದಂತೆ ನಡೆದರು. ದುಂಡು ಕಲ್ಲುಗಳನ್ನು ತನ್ನೊಂದಿಗೆ ಒಯ್ಯುವ ಆಸೆ ಕೌಶಿಕನಿಗೆ. ಆದರೆ, ಅವು ಕೈಯಲ್ಲಿ ನಿಲ್ಲಲೊಲ್ಲವು. ಅಲ್ಲದೆ, ಅವುಗಳ ಬಣ್ಣದಲ್ಲೂ ವಿಶೇಷವೇ. ಕೆನ್ನೀಲಿಯ ವಿಚಿತ್ರ ಕಲ್ಲುಗಳು.

"ಇವನ್ನು ಕರವಸ್ತ್ರದಲ್ಲಿ ಹಿಡಿದು ನೋಡುವೆ."

ಹಾಗೆಂದವನೇ ಕೌಶಿಕ್ ಕರವಸ್ತ್ರದಲ್ಲಿ ಕೆಲವು ಸಣ್ಣ ಕಣ್ಣುಗಳನ್ನು ಅದುಮಿ ಹಿಡಿದು ಎತ್ತಿಕೊಂಡ. ಕೆಲವು ಕಲ್ಲುಗಳು ಸಿಕ್ಕಿದರೂ ಅವು ಪುಡಿಪುಡಿಯಾಗಿದ್ದುವು. ನೋಡಿ ಆಶ್ಚರ್ಯವಾದರೂ ಅವನ್ನು ಕರವಸ್ತ್ರದಲ್ಲಿ ಬಿಗಿಗಟ್ಟಿದ. ಕರ್ನಲ್ ನಗುತ್ತ ಅಂದ "ಪರವಾಯಿಲ್ಲ ; ನೀನು ಜಾಣ ! ಒಳ್ಳೆಯ ಉಪಾಯ ಮಾಡಿದೆ."

"ಅವು ಕೈಬೆರಳ ಸಂದಿಯಲ್ಲಿ ಜಾರುತಿದ್ದುವು. ಈಗ ಜಾರುವಂತಿಲ್ಲ."

ಇಬ್ಬರ ಮುಖದಲ್ಲೂ ಮಂದಹಾಸ ಮಿನುಗಿತು. ತಿಂಗಳ ಬೆಳಕಿನಂತಹ ಹಾಲ್ಬೆಳಕು ಇದ್ದುದರಿಂದ ಹಾದಿ ಸರಾಗ. ಇಬ್ಬರೂ ಕೈಕೈ ಹಿಡಿದುಕೊಂಡೇ ಮುಂದೆ ಮುಂದೆ ನಡೆದರು. ದುಂಡು ಕಲ್ಲುಗಳಂಗಣ ಕಳೆದ ನಂತರ ಹಿಂದಿನ ಧೂಳೀಮಯವಾದ ತಾಣ. ಮುಂದೆ ಸ್ವಲ್ಪ ದೂರದಲ್ಲಿ ರಾಕೆಟ್ ಇದ್ದ ತಾಣದಲ್ಲಿಯೇ ನಿಂತಿತ್ತು. ಇಬ್ಬರೂ ಹೋಗಿ ಏಣಿ ಹತ್ತಿದರು. ಕರ್ನಲ್ ಗುಂಡಿ ಅದುಮಿದ.

ದಲ್ಲಿಯೇ ಇದ್ದಂತಹ ಅನುಭವ. ಮಂಜುಮಯವಾದರೂ ಚಳಿಯ ಗೋಜಿಲ್ಲ. ಮಂಜನ್ನು ಕೈಯಿಂದ ಮುಟ್ಟಬಹು ದೇನೋ ಎಂಬಷ್ಟು ಭ್ರಾಮಕ. ಆದರೆ ಅದು ಕೈಗೆ ಸಿಕ್ಕ ರಷ್ಟೆ? ಎರಡೂ ಕೈಗಳನ್ನು ನೀಡಿದ. ಮಂಜು ಸುತ್ತ ಮುತ್ತ ಸರಿದು ಹೋಗುತ್ತಲೇ ಇದೆ.

"ಕರ್ನಲ್, ನಾವಿಲ್ಲಿ ಸ್ಕೇಟಿಂಗ್ ಮಾಡಬಹು ದಲ್ಲವೇ ?"

"ಅನುಭವಸ್ಥರು ಮಾಡಬಹುದು. ನಿನ್ನಿಂದಾಗದು. ನೀನು ಜಾರಿದರೆ ಇನ್ನಾವುದೋ ಲೋಕಕ್ಕೆ ಹೋಗಿಬಿಡ ಬಹುದು ! ಆದ್ದರಿಂದ ಈಗ ಆ ಸಾಹಸ ಬೇಡ."

"ನಾವೀಗ ಹೋಗುವುದು ಎಲ್ಲಿಗೆ ?"

"ನಿನಗೆ ತೋರಿಸಬೇಕಾದುದು ಸ್ವರ್ಗದ ಸ್ವರ್ಣ ದ್ವಾರ. ಈ ಮಂಜುಮಯ ಪ್ರದೇಶವನ್ನು ದಾಟಿದರೆ ನಾವು ಕಾಣುವುದೇ ಅದು."

"ಆದರೆ, ಮುಂದೆ ಹಾದಿಯೇ ಕಾಣದಷ್ಟು ಮಂಜು. ಹೋಗುವುದಾದರೂ ಹೇಗೆ ?"

"ಅದೇ ಕಷ್ಟ."

"ಈಗ ಏನು ಮಾಡೋಣ ? ಮುಂದೆ ಹೋಗೋ ಣವೇ ? ಹಿಂದೆ ಹೋಗೋಣವೇ ?"

"ಹಿಂದೆ ನಾನು ಬಂದಾಗ ಮಂಜು ಇಷ್ಟು ದಟ್ಟ ವಾಗಿರಲಿಲ್ಲ. ಸುಖವಾಗಿ ಹೋಗಿ ಬಂದೆ. ಈ ಸಲ ಬಹಳ ಮಂಜು. ಹಾದಿ ತಪ್ಪಿದರೆ ಕಷ್ಟ. ಹಿಂದಿರುಗು ವುದು ಲೇಸು."

"ನಡೆ, ಹಾಗಾದರೆ..."

ಇಬ್ಬರೂ ಕೈಕೈ ಹಿಡಿದುಕೊಂಡು ಹಿಂದಿರುಗಿ ನಡೆಯ ತೊಡಗಿದರು. ಆಕಾಶಕಾಯದಲ್ಲಿ ನಕ್ಷತ್ರಗಳು ಜಗಜಗಿಸುತ್ತಿವೆ. ರೇಖಾ ಚಂದ್ರಮ ಕಂಗೊಳಿಸುತಿದ್ದಾನೆ. ಹಾದಿ ಯಥೋಚಿತವಾಗಿ ಸಾಗುತ್ತಿದೆ. ದುಂಡು ಕಲ್ಲುಗಳು ಉರುಳಾಡುತಿದ್ದರೂ ಜಾರಿ ಬೀಳದಂತೆ ನಡೆದರು. ದುಂಡು ಕಲ್ಲುಗಳನ್ನು ತನ್ನೊಂದಿಗೆ ಒಯ್ಯುವ ಆಸೆ ಕೌಶಿಕನಿಗೆ. ಆದರೆ, ಅವು ಕೈಯಲ್ಲಿ ನಿಲ್ಲಲೊಲ್ಲವು. ಅಲ್ಲದೆ, ಅವುಗಳ ಬಣ್ಣದಲ್ಲೂ ವಿಶೇಷವೇ. ಕೆನ್ನೀಲಿಯ ವಿಚಿತ್ರ ಕಲ್ಲುಗಳು.

"ಇವನ್ನು ಕರವಸ್ತ್ರದಲ್ಲಿ ಹಿಡಿದು ನೋಡುವೆ."

ಹಾಗೆಂದವನೇ ಕೌಶಿಕ್ ಕರವಸ್ತ್ರದಲ್ಲಿ ಕೆಲವು ಸಣ್ಣ ಕಣ್ಣುಗಳನ್ನು ಅದುಮಿ ಹಿಡಿದು ಎತ್ತಿಕೊಂಡ. ಕೆಲವು ಕಲ್ಲುಗಳು ಸಿಕ್ಕಿದರೂ ಅವು ಪುಡಿಪುಡಿಯಾಗಿದ್ದುವು. ನೋಡಿ ಆಶ್ಚರ್ಯವಾದರೂ ಅವನ್ನು ಕರವಸ್ತ್ರದಲ್ಲಿ ಬಿಗಿಗಟ್ಟಿದ. ಕರ್ನಲ್ ನಗುತ್ತ ಅಂದ "ಪರವಾಯಿಲ್ಲ ; ನೀನು ಜಾಣ ! ಒಳ್ಳೆಯ ಉಪಾಯ ಮಾಡಿದೆ."

"ಅವು ಕೈಬೆರಳ ಸಂದಿಯಲ್ಲಿ ಜಾರುತಿದ್ದುವು. ಈಗ ಜಾರುವಂತಿಲ್ಲ."

ಇಬ್ಬರ ಮುಖದಲ್ಲೂ ಮಂದಹಾಸ ಮಿನುಗಿತು. ತಿಂಗಳ ಬೆಳಕಿನಂತಹ ಹಾಲ್ಬೆಳಕು ಇದ್ದುದರಿಂದ ಹಾದಿ ಸರಾಗ. ಇಬ್ಬರೂ ಕೈಕೈ ಹಿಡಿದುಕೊಂಡೇ ಮುಂದೆ ಮುಂದೆ ನಡೆದರು. ದುಂಡು ಕಲ್ಲುಗಳಂಗಣ ಕಳೆದ ನಂತರ ಹಿಂದಿನ ಧೂಳೀಮಯವಾದ ತಾಣ. ಮುಂದೆ ಸ್ವಲ್ಪ ದೂರದಲ್ಲಿ ರಾಕೆಟ್ ಇದ್ದ ತಾಣದಲ್ಲಿಯೇ ನಿಂತಿತ್ತು. ಇಬ್ಬರೂ ಹೋಗಿ ಏಣಿ ಹತ್ತಿದರು. ಕರ್ನಲ್ ಗುಂಡಿ ಅದುಮಿದ.

ವಿಣಿ ಒಳಗಡೆ ಬಂದೊಡನೆ ಕದ ಮುಚ್ಚಿಕೊಂಡಿತು. ಇಬ್ಬರೂ ಕುರ್ಚಿಯ ಬೆಲ್ಟ್ ಬಿಗಿದುಕೊಂಡರು.

"ನೋಡು, ನಿನಗೀಗ ಒಂದು ತಮಾಷೆ ತೋರಿಸುವೆ."

"ತೋರಿಸಪ್ಪಾ ! ಏನೇನು ತೋರಿಸುವೆಯೋ, ಎಲ್ಲ ವನ್ನೂ ನೋಡಿಬಿಡುವೆ."

ಕರ್ನಲ್ ಕಪ್ಪುಬಣ್ಣದ ಗುಂಡಿಯನ್ನು ಅದುಮಿದ. ಟಿ.ವಿ. ಯಂತಹ ಒಂದು ಕನ್ನಡಿಯ ಮೇಲೆ ಬೆಳ್ಳನೆ ಬೆಳಕು ಮೂಡಿತು. ಆ ಕೂಡಲೇ ಗುಂಡಿಯನ್ನು ಎಡಕ್ಕೆ ತಿರುಗಿಸಿ ತಮ್ಮ ಮನೆಯ ಚಿತ್ರವನ್ನು ಸೆರೆ ಹಿಡಿದ. ಅಪ್ಪ ಅಮ್ಮ ಮಲಗಿದ್ದಾರೆ. ಇನ್ನೂ ಬೆಳಗಾಗಿಲ್ಲ. ಬೀದಿಯಲ್ಲಿ ಬೀಟ್ ಪೋಲೀಸಿನವ ಹಾದು ಹೋದ. ನಾಯಿ-ಬ್ರೌನಿ ತನ್ನ ಸುಪ್ಪತ್ತಿಗೆಯ ಮೇಲೆ ಮಲಗಿದೆ. ಇನ್ನೂ ಅಂಗಣದ ದೀಪ ಉರಿಯುತಿತ್ತು.

"ಎಂತಹ ಆಶ್ಚರ್ಯ !" ಉದ್ಗಾರ ತೆಗೆದ ಕೌಶಿಕ್.

"ನೋಡು, ಇದು ಆಧುನಿಕ ಯುಗದ ಚಮತ್ಕಾರ. ರಾಕೆಟ್‌ಗಳಂತಹ ಅದ್ಭುತಗಳು ದಿನದಿನವೂ ಸೃಷ್ಟಿಯಾಗು ತ್ತಿವೆ. ವಿಜ್ಞಾನ ಅತ್ತಿತ್ತ ಹರೆಗೈಚಾಚಿ ಬೆಳೆಯುತ್ತಲೇ ಇದೆ. ಅದಕ್ಕೆ ನಿಲುಗಡೆ ಇಲ್ಲವೇ ಇಲ್ಲ..." ಅವನು ಹೇಳು ತ್ತಲೇ ಇದ್ದ. ಇವನೂ ಕೇಳಿಯೇ ಕೇಳಿದ.

"ಈಗ ನಾವು ಹೋಗುವುದೆಲ್ಲಿಗೆ ?"

"ಮನೆಗೆ..."

ಇದ್ದಕ್ಕಿದ್ದಂತೆಯೇ ಟಿ.ವಿ.ಯ ಬೆಳಕು ನಂದಿತು. ಏನೋ ಗೊರಗೊರ ಸದ್ದು. ಹಿಂದೆಯೇ ಜೋರಾಗಿ ಕಿರ್ರನೆ ಕಿರಿಚಿದ ಸದ್ದು !

ತಾಯಿ ಓಡಿ ಬಂದು ಮಗನನ್ನು ಅಪ್ಪಿ ಹಿಡಿದು "ಏನಾಯಿತು ಮಗೂ ಏಕೆ ಕಿರಿಚಿದೆ ?" ಎಂದು ಕಾತರದಿಂದ ಕೇಳಿದಳು. ಮಗನ ಮುಖದ ಮೇಲೆಲ್ಲಾ ಬೆವರಿನ ತುಂತುರು ಮೂಡಿದ್ದುವು. ಅವನು ಗಾಬರಿಯುಕ್ತ ಅರಳು ಗಣ್ಣುಗಳಿಂದ ನೋಡಿದ.

"ಏನಾಯ್ತು ಮಗೂ ? ಏಕೆ ಕಿರಿಚಿದೆ ?"

ಕೌಶಿಕ್ ಹಿಂದಿನ ಘಟನೆಯನ್ನು ಜ್ಞಾಪಿಸಿಕೊಂಡು ನುಡಿದ "ಕೂಗಿದ್ದು ನಾನಲ್ಲ. ರಾಕೆಟ್ಟಿನ ಯಾಂತ್ರಿಕ ದೋಷದಿಂದ ಉಂಟಾದ ಧ್ವನಿ !"

ತಾಯಿ ನಕ್ಕುಬಿಟ್ಟಳು. ಊರೆಲ್ಲಾ ಬೆಳ್ಳಂಬೆಳ ಗಾಗಿದೆ. ಮಗ್ಗುಲಲ್ಲಿ ಕರ್ನಲ್ ಮಲಗಿದ್ದಾನೆ. ಹಾಗಾ ದರೆ ಇದೆಲ್ಲಾ ಏನು ? ನಾನು ಕನಸು ಕಂಡೆನೇ ?

ಹುಡುಗ ಅಂತರ್ಮುಖಿಯಾಗಿ ಯೋಚಿಸಿದ.

—o—

ನಾನು ನೀನು ಕೂಡಿ ವಾಣಿ ಪೂಜೆ ಮಾಡಿ
ಶಾಲೆಯಲ್ಲಿ ಕುಳಿತು ಓದು ಬರಹ ಕಲಿತು
ಮನಃಕಲ್ಪ ಕಡೆದು ರಾಗ ದ್ವೇಷ ತೊರೆದು
ಎಲ್ಲರೊಂದುಗೂಡಿ ವಿಶ್ವಪಥವ ಹಿಡಿದು
ಜಗದ ಜ್ಯೋತಿ ಬೆಳಗೆ ಮುಂದೆ ಮುಂದೆ ಸಾಗಿ
ಓಡಿಯೋಣ ವಿಶ್ವಪಥವ ಪಡೆಯೋಣ ಸತ್‌ಶಾಂತಿಯ.

—o—

ಕೋತಿಯ ಪಾತ್ರ

ಕೌಬೀನೀ ಕೆರೆಯಲ್ಲಿ ಯಾವತ್ತೂ ಬತ್ತಿಹೋಗದ ಜಲರಾಶಿ.

ಮಳೆಯಿಲ್ಲದ ಸುಡು ಬೇಸಗೆಯಲ್ಲಿ ಎಲ್ಲಾ ಬಗೆಯ ಜೀವಿಗಳಿಗೂ ನೀರೊದಗಿಸುವ ಸ್ವಚ್ಛ ಸುಂದರ ಕೆರೆ ಕೌಬೀನೀ. ಅದರ ತಣ್ಪಿನಿಂದ ಸುತ್ತಮುತ್ತಿನಲ್ಲಿ ಗಿಡಮರಗಳು ಸದಾ ಹಸಿರಾಗಿಯೇ ಇರುತ್ತವೆ. ಆ ಕೆರೆ, ಆ ಕಾಡು, ಆ ಪಕ್ಷಿಗಳ ಲೋಕ ನೋಡಲು ಬಲು ಚೆಂದ. ಪಕ್ಷಿಗಳು ಹಣ್ಣು ತಿಂದು ನೀರು ಕುಡಿದುವು ಎಂದರೆ ಕೊರಳೆತ್ತಿ ಹಾಡುವುದೇ ಕೆಲಸ. ಇಡೀ ಕಾಡಿನ ತುಂಬೆಲ್ಲಾ ಚಿಲಿಪಿಲಿ ರಾಗ-ರಾಗಾನುರಾಗ.

ಆ ಕೆರೆಯಲ್ಲಿ ಅನೇಕ ಮುದ್ದು ಮುದ್ದಾದ ಹಂಸಗಳ ವಾಸ. ಅವು ಸದಾ ಆನಂದದಿಂದ ಕ್ರೇಂಕರಿಸುತ್ತಲೇ ಇರುತ್ತವೆ. ಸ್ವಾಮಿ ಹಂಸ ಎಲ್ಲಕ್ಕೂ ಯಜಮಾನ. ಅದರ ಅಣತಿಗನುಗುಣವಾಗಿ ಇತರ ಹಂಸಗಳ ನಡವಳಿಕೆ. ಆ ಕೆರೆಯಲ್ಲಿ ಮೀನು ಹುಳಹುಪ್ಪಟೆಗಳ ಸಮೃದ್ಧವಾದ ಆಹಾರ. ಅಂದಮೇಲೆ, ಅವುಗಳಿಗೆ ಬೇರೆ ಕಡೆಗೆ ವಲಸೆ

ಹೋಗುವ ಪ್ರಸಂಗ ಬರುವುದೇ ಇಲ್ಲ. ಅವು ಸದಾ ಸುಖೀ ಜೀವಿಗಳು.

ಕೆರೆಯ ತೀರದಲ್ಲಿ ಕೆಲವು ಬಗೆಯ ಹಣ್ಣಿನ ಮರಗಳೂ ಇದ್ದುವು.

ಆ ಮಾರ್ಗವಾಗಿ ಪಯಣಿಸುವ ಪಥಿಕರೆಲ್ಲಾ ನೀರು ಕುಡಿಯಲು ಬರುವುದು ಕೌಬೀನೀ ಕೆರೆಗೆ. ನೀರು ಕುಡಿದು ದಣಿವಾರಿಸಿಕೊಂಡು ಮರದ ಬುಡದಲ್ಲಿ ಕುಳಿತು ಕೆರೆಯ ಮೇಲೆ ದೃಷ್ಟಿ ಹಾಯಿಸಿ ಆನಂದ ಪಡುತ್ತಾರೆ. ಅವರ ಆನಂದವನ್ನು ನೋಡಿದರೆ–ನೋಡುತಿದ್ದರೆ ಹಂಸಗಳಿಗೂ ಆನಂದ–ಸಂತೋಷ.

ಸ್ವಾಮಿ ಹಂಸ ಹಣ್ಣಿನ ಮರದ ಮೇಲೆ ಹಾರಿ ಕುಳಿತು ಹಣ್ಣುಗಳನ್ನು ಕೆಳಗೆ ಬೀಳಿಸುತ್ತ ಕ್ರೇಂಕರಿಸಿ ಸೂಚನೆ ಕೊಡುತಿತ್ತು ಪಥಿಕರಿಗೆ. ಆಗ ಪಥಿಕರು ಹಣ್ಣುಗಳನ್ನು ಹೆಕ್ಕಿ ತಿಂದು ಮುಗಿಯುವುದರೊಳಗೆ ಇನ್ನೊಂದು ಹಣ್ಣು ಕೆಳಗೆ ಬೀಳುತಿತ್ತು. ಎರಡೂ ರೆಕ್ಕೆಗಳನ್ನು ಎತ್ತಿ ಕ್ರೇಂಕರಿಸುತ್ತ ಅದು ಹಣ್ಣನ್ನು ಕೆಳಗೆ ಹಾಕುತಿದ್ದರೆ ತಲೆಯೆತ್ತಿ ನೋಡುವುದೇ ಆನಂದ ಪಥಿಕರಿಗೆ. ಎಲ್ಲಾ ಪಥಿಕರೂ ಒಡಲು ತುಂಬಿದ ನಂತರ ಅಲ್ಲಿಂದ ಹೊರಟು ಬಿಡುತಿದ್ದರು.

ಅಂದು, ಪಥಿಕನೊಬ್ಬ ಭುಜದ ಮೇಲೆ ಚೀಲವನ್ನು ಹೊತ್ತು ಬಲು ಆಯಾಸಗೊಂಡಿದ್ದುದರಿಂದ 'ಉಸ್' ಎನ್ನುತ್ತ ಕುಳಿತುಕೊಂಡ. ಬಾಯಾರಿದ್ದರೂ ತಕ್ಷಣ ನೀರಿಗಿಳಿಯಲಾರದಷ್ಟು ಆಯಾಸ. ತೀರದಲ್ಲಿದ್ದ ಸ್ವಾಮಿ ಹಂಸ ಕೇಳಿತು,

"ಅಯ್ಯಾ, ಪಥಿಕ ! ತುಂಬಾ ಬಳಲಿದ್ದೀಯೆ ! ಬಲು ದೂರದಿಂದ ನಡೆದು ಬಂದಂತಿದೆ ! ಹೌದೇ ? ಆಯಾಸ ವಾಗಿದಿದ್ದರೆ ನೀರು ಕುಡಿದು ದಣಿವಾರಿಸಿಕೊ... ನಾನು ಹಣ್ಣು ಕಿತ್ತುಕೊಡುವೆ."

"ನಿಜ...ನಿಜ. ನಾನಿಂದು ಬಲು ದೂರದಿಂದ ನಡೆದು ಬಂದಿರುವೆ. ತುಂಬಾ ಆಯಾಸ."

"ದಯಮಾಡಿ ಇಲ್ಲಿಯೇ ವಿಶ್ರಾಂತಿ ತೆಗೆದುಕೊ. ತಣ್ಣನೆಯ ನೆರಳಿದೆ. ತಿಳಿನೀರಿದೆ. ಅವಸರಿಸಬೇಡ. ಆಯಿತೇ ?" ದಯನೀಯವಾದ ದನಿ ಹರಿಸಿತು ಸ್ವಾಮಿ ಹಂಸ.

"ಆಗಲಿ...ಇಷ್ಟೊಂದು ಉಪಚರಿಸುವವರು ಯಾರಿದ್ದಾರೆ ?"

ಪಥಿಕ ಏದುಸಿರು ಬಿಡುತ್ತ ಸ್ವಲ್ಪ ಹೊತ್ತು ಕುಳಿತಿದ್ದ. ಅನಂತರ ಎದ್ದು ತೀರಕ್ಕಿಳಿದು ಹೊಟ್ಟೆಯ ತುಂಬ ನೀರು ಕುಡಿದು ದಣಿವಾರಿಸಿದ ಬಳಿಕ ಮರದ ಬುಡದಲ್ಲಿ ಕುಳಿತುಕೊಂಡ. ಅದೊಂದು ದೊಡ್ಡ ಅತ್ತಿಯ ಮರ. ಅದರ ತುಂಬೆಲ್ಲಾ ಕಳಿತು ಹಣ್ಣಾದ ಅತ್ತಿಯ ಹಣ್ಣುಗಳು. ಭಾರೀ ಗಾತ್ರದ ಮರವಾದುದರಿಂದ ಯಾರೂ ಹತ್ತುವಂತಿರಲಿಲ್ಲ. ಅದು ಕಾಡು ಪಶು ಪಕ್ಷಿಗಳಿಗೇ ಮೀಸಲು.

ಸ್ವಾಮಿ ಹಂಸ ಮರಕ್ಕೆ ಹಾರಿ ಕುಳಿತುಕೊಂಡು ಕ್ರೇಂಕರಿಸುತ್ತ ಹಣ್ಣುಗಳನ್ನು ಕೊಕ್ಕಿನಿಂದ ಕಿತ್ತು ಕೆಳಗೆ ಹಾಕಿತು. ಪಥಿಕ ಆನಂದದಿಂದ ತಿಂದ. ಅದು ಕಿತ್ತು ಕೆಳಗೆ ಹಾಕಿದಂತೆಲ್ಲಾ ಹೆಕ್ಕಿ ಹೆಕ್ಕಿ ತಿಂದು ಒಡಲ ಹಸಿವೆ ಕಳೆದು ಆನಂದಿಸಿದ. ದೂರ ಪಯಣದಿಂದ ಬಳಲಿದ ಅವನು ಮರದ ಬುಡದಲ್ಲಿ ಮೂಟೆಯನ್ನು ತಲೆದಿಂಬಾಗಿ ಇಟ್ಟು ಮಲಗಿ ನಿದ್ದೆ ಹೋದ.

ನಿದ್ದೆ...ಬಲೂ ಸೊಗಸಾದ ನಿದ್ದೆ. ಪಥಿಕ ಗೊರಕೆ ಹೊಡೆಯ ಹತ್ತಿದ.

ಸ್ವಲ್ಪ ಹೊತ್ತು ಉರುಳಿತು.

ಕೋತಿಯೊಂದು ಮರದಿಂದ ಮರಕ್ಕೆ ಜಿಗಿಯುತ್ತಾ ಬಂದು ಅತ್ತಿಯ ಮರದ ಕೊಂಬೆಯ ಮೇಲೆ ಕುಳಿತು ಕೊಂಡು ಹಣ್ಣುಗಳನ್ನು ಕಿತ್ತು ಕಿತ್ತು ತಿಂದಿತು. ಹೊಟ್ಟೆ ತುಂಬಿದ ನಂತರ ಕೆಳಗೆ ಮಲಗಿದ್ದ ಪಥಿಕನ ಮೇಲೆ ದೃಷ್ಟಿ ಹರಿಯಿತು. ಅವನ ಸೊಗಸಾದ ನಿದ್ದೆಯಿಂದ ಹೊಟ್ಟೆ ಉರಿಯಿತು. ಅಂದಮೇಲೆ ಕೋತಿ ಸುಮ್ಮನಿರುವುದುಂಟೇ?

ಅತ್ತಿ ಹಣ್ಣಿನ ದೊಡ್ಡ ಗೊಂಚಲೊಂದನ್ನು ಕಿತ್ತು ಅವನ ಮೂಗಿನ ನೇರಕ್ಕೆಸೆಯಿತು.

ಅದೇನು ಸಾಮಾನ್ಯ ಪೆಟ್ಟೇ ? ಮೂಗು ಒಡೆದು ನೆತ್ತರು ಬರುವಂತಹ ಪೆಟ್ಟು ! ಪಥಿಕ ಎದ್ದು ಮರದ ಕಡೆ ದೃಷ್ಟಿ ಹಾಯಿಸಿದ. ಕೋತಿ ಆಗಲೇ ಮಾಯವಾಗಿದ್ದುದ ರಿಂದ ದೃಷ್ಟಿಗೆ ಬಿದ್ದುದು ಸ್ವಾಮಿ ಹಂಸ ಮಾತ್ರ !

ಪಥಿಕ ಒಂದು ಗಳಿಗೆ ಯೋಚಿಸಿದ...ಆಗ ಎಂತಹ ಉಪಚಾರದ ಮಾತಾಡಿತು ಹಂಸ ? ಈ ಮೋಸಕ್ಕಾಗಿ ಅಲ್ಲವೇ ನನ್ನನ್ನು ವಿಶ್ರಮಿಸಲು ಹೇಳಿದ್ದು ! !

ಅವನ ಸಿಟ್ಟು ನೆತ್ತಿಗೇರಿತು. ಕೂಡಲೇ ಕಲ್ಲನ್ನು ಹೆಕ್ಕಿ ಮರದ ಮೇಲೆ ರೆಕ್ಕೆ ಬಿಚ್ಚಿ ಕುಳಿತಿದ್ದ ಹಂಸದೆಡೆಗೆ ಬೀಸಿ ಒಗೆದ. ಕಲ್ಲು ನೇರವಾಗಿ ಅದರ ರೆಕ್ಕೆಗೆ ಬಡಿದು ರೆಕ್ಕೆ ಮುರಿಯಿತು.

ದುಷ್ಟರಿಂದ ಶಿಷ್ಟರಿಗೆ ಕೇಡು ತಪ್ಪಿದ್ದಲ್ಲ.

—o—

ವಾಸುಕೀಮಣಿ

ದೇಶದಲ್ಲಿ ಮಳೆಯ ಸುಳಿವೇ ಇಲ್ಲ.

ಜನ ದನ ಪ್ರಾಣಿ ಪಕ್ಷಿಗಳು ಮಳೆಗಾಗಿ ಗೀಳಿಡುತಿದ್ದುವು. ಕೆರೆ ಕುಂಟೆಗಳು ಬತ್ತಿ ಒಣಗಿ ನೆಲ ಬಾಯಿಬಿಟ್ಟು ಗಾರಾಯಿತು. ಗಗನದ ತುಂಬೆಲ್ಲಾ ಬೆಳ್ಮುಗಿಲು ಕೆಮ್ಮುಗಿಲುಗಳ ಮಹಾ ಮೇಳ. ಒಂದಾದರೂ ಕಾರ್ಮುಗಿಲು ಮೂಡಲಿಲ್ಲ. ಮಳೆ ಕರೆಯುವ ಸೂಚನೆಯೂ ಇಲ್ಲ. ನೆತ್ತಿ ಸುಡುವಂತಹ ರಣರಣಿಸುವ ಸುಡು ಬಿಸಿಲು. ಕಾಲುಗಳನ್ನು ಕಾದ ಹಂಚಿನಂತೆ ಸುಡುವ ನೆಲ.

ಬರಗಾಲ...ಬರಗಾಲ. ದೇಶದ ತುಂಬೆಲ್ಲಾ ಬರಗಾಲ ಹರಡಿತು.

ದಿನವೂ ಜೀವ ಕೋಟಿಗಳು ಸಾಯುತಿದ್ದುವು, ಅಥವಾ ದೇಶ ಬಿಟ್ಟು ಹೊರ ಹೋಗುತಿದ್ದುವು. ಎಲ್ಲೆಡೆಯೂ ಹಾಹಾಕಾರವೆದ್ದಿತು. ದಾಹ–ಧಗೆ–ಹಸಿವುಗಳು ಎಡೆಬಿಡದೆ ಜೀವಿಗಳನ್ನು ಕಾಡಿದುವು. ಜನ ದನಗಳ ಕಣ್ಣಿನಲ್ಲಿ ಕಣ್ಣೀರೂ ಸಹ ಬತ್ತಿ ಹೋಯಿತು.

ಆ ಊರಿನಲ್ಲಿ ಒಬ್ಬ ದಯಾವಂತ ಶ್ರೀಮಂತಿನಿ ಇದ್ದಳು. ಜನರ ಪರಿತಾಪವನ್ನು ಕಂಡು ಮನಮರುಗಿ ಎಲ್ಲರಿಗೂ ಒಪ್ಪೊತ್ತಿನ ಗಂಜಿಗೆ ಏರ್ಪಾಡು ಮಾಡುವು

ದಾಗಿಯೂ ಎಲ್ಲರೂ ಅವರವರ ಬಟ್ಟಲಿನ ಸಹಿತ ಮನೆಯ ಬಳಿಗೆ ಬರಬೇಕೆಂದು ಡಂಗೂರ ಸಾರಿಸಿದಳು. ಆ ಕ್ಷಣವೇ ಜನರೆಲ್ಲಾ ಸಾಲುಗಟ್ಟಿ ಬರತೊಡಗಿದರು. ಜನ. ಜನ. ಜನ. ಜನವೇ ಜನ. ಶ್ರೀಮಂತಿನಿ ನೋಡುತ್ತಾಳೆ. ಗಂಜಿ ಪೂರೈಸಲಾರದಷ್ಟು ಜನ. ಆ ಜನರ ಸ್ಥಿತಿಯನ್ನು ನೋಡಿದರೆ ಗಂಜಿಯನ್ನು ನಿಲ್ಲಿಸಲಾರದಂತಹ ಸಂಕಟಕರವಾದ ಪ್ರಸಂಗ. ಎಲುಬಿನ ಹಂದರಗಳೇ ಸಾಲುಗಟ್ಟಿ ಬರುತಿದ್ದಾರೆ. ಆದರೂ, ಎದೆಗೆಡದೆ ಗಂಜಿ ಕೇಂದ್ರವನ್ನು ನಡೆಸಿದಳು ಶ್ರೀಮಂತಿನಿ.

ಒಣ ಭೂಮಿಯಲ್ಲಿ ನಾರು ಬೇರು ಸಹ ತಿನ್ನಲು ಸಿಕ್ಕುವುದು ಕಷ್ಟವೇ.

ಆ ಜನರ ಸಾಲಿನಲ್ಲಿ ದಿನವೂ ಬರುತಿದ್ದ ಸಣ್ಣ ಹುಡುಗಿಯನ್ನು ನೋಡುತಿದ್ದಳು ಶ್ರೀಮಂತಿನಿ. ಅವಳು ಎಲ್ಲರಂತೆ ಗಂಜಿಗಾಗಿ ಮುಂದೆ ನುಗ್ಗದೆ ತನ್ನ ಸರದಿ ಬಂದಾಗ ಗಂಜಿ ತೆಗೆದುಕೊಳ್ಳುತಿದ್ದಳು. ಆ ಸಣ್ಣ ಹುಡುಗಿಯನ್ನು ನೋಡಿದರೆ ಮನಸ್ಸು ದ್ರವಿಸುವಷ್ಟು ಮರುಕ ಶ್ರೀಮಂತಿನಿಗೆ. ಅದುವರೆಗೆ ನೂಕುನುಗ್ಗಲಿಂದಾಗಿ ಅವಳನ್ನು ಮಾತಾಡಿಸಲಾಗಿರಲಿಲ್ಲ. ತೀರಾ ಕೊನೆಯವಳಾದ ಅವಳನ್ನು ಇಂದು ಕಣ್ಣಿಟ್ಟು ನೋಡಿದಳು ಶ್ರೀಮಂತಿನಿ. ಹತ್ತು ಹನ್ನೆರಡು ವರುಷಗಳ ಬಾಲೆ. ಚಿಂದಿ ಚಿಂದಿ ಬಟ್ಟೆ, ಮೂಳೆಯ ಮೈ, ಮಾತಾಡಲೂ ಉಸಿರಿಲ್ಲದಂತಹ ಸೋಲು-ಸುಸ್ತು.

"ನಿನ್ನ ಹೆಸರೇನು ಮಗೂ ?"

"ವಾಸುಕೀಮಣಿ..."

"ನಿನಗೆ ತಾಯಿ ತಂದೆಯರಿದ್ದಾರೆಯೇ ?"

"ಇಲ್ಲ. ಇಬ್ಬರೂ ತೀರಿಕೊಂಡಿದ್ದಾರೆ," ಹೇಳಲಾರದೇ ಹೇಳಿದಳು ಹುಡುಗಿ.

"ಯಾವಾಗ ತೀರಿಕೊಂಡರು ?"

"ತಾಯಿ ಹಿಂದೆಯೇ ತೀರಿಕೊಂಡಿದ್ದಳು.... ತಂದೆ ಬರಗಾಲ ಬಂದ ನಂತರ ತೀರಿಕೊಂಡ...." ಒಣಗಿದ ನಾಲಿಗೆಯಲ್ಲಿ ಮಾತು ಸರಾಗವಾಗಿ ಹೊರಡದೆ ಕಷ್ಟಪಟ್ಟಳು ಪುಟ್ಟ ಹುಡುಗಿ-ವಾಸುಕೀಮಣಿ.

"ಮತ್ತೆ ನೀನೀಗ ಯಾರ ಜೊತೆ ಇದ್ದೀಯೆ ?"

"ನನ್ನ ಅಜ್ಜಿಯ ಜೊತೆ."

"ಎಲ್ಲರೂ ಮುಂದೆ ಮುಂದೆ ನಿಲ್ಲುವಾಗ ನೀನೇಕೆ ಹಿಂದೆ ಹಿಂದೆ ಇರುತ್ತಿ ?"

"ಎಲ್ಲರೂ.... ಹಸಿದವರು. ಅದಕ್ಕಾಗಿ...."

"ನೀನು ಹಸಿದವಳಲ್ಲವೇ ?"

"ಹೌದು ತಾಯಿ...."

"ಮತ್ತೇಕೆ ಹಿಂದುಳಿದೆ ಮಗೂ ?"

"ಎಲ್ಲರನ್ನು ಹಿಂದುಳಿಸಿ ಮುಂದೆ ನುಗ್ಗುವುದು ನನಗಿಷ್ಟವಿಲ್ಲ.... ಎಲ್ಲರೂ ತೀರಾ ಹಸಿದವರು ಅವರಿಗೆ ಅಡ್ಡವಾಗುವುದು ಸರಿ ಎನಿಸುವುದಿಲ್ಲ ನನಗೆ."

"ನೀನು ತುಂಬಾ ಒಳ್ಳೆಯ ಹುಡುಗಿ...."

"ನಿನ್ನ ಮನೆಯಲ್ಲಿ ಇನ್ನಾರಿದ್ದಾರೆ ?"

"ಇನ್ನಾರು ಇಲ್ಲ. ಕಣ್ಣು ಕಾಣಿಸದ ಅಜ್ಜಿ ಇದ್ದಾಳೆ. ಅವಳಿಗೂ ಕಾಹಿಲೆ....ತುಂಬಾ ನರಳುತ್ತಾಳೆ."

"ಇನ್ನು ಮೇಲೆ ನೀನೇ ಮುಂದಾಗಿ ಗಂಜಿ ತೆಗೆದು ಕೊಂಡು ಹೋಗು. ಸಂಕೋಚ ಪಡಬೇಡ. ಚಿಕ್ಕ ಹುಡು ಗಿಗೆ ಪ್ರಾಶಸ್ತ್ಯ ನೀಡುವುದು ತಪ್ಪಲ್ಲ."

ಶ್ರೀಮಂತಿನಿ ಹುಡುಗಿಯ ಬಟ್ಟಲಿಗೆ ತುಸು ಹೆಚ್ಚಾ ಗಿಯೇ ಗಂಜಿಯನ್ನು ಸುರಿದಳು.

ಹುಡುಗಿಯ ಕಣ್ಣುಗಳಲ್ಲಿ ಸುಖ-ದುಃಖಗಳ ದಟ್ಟ ಛಾಯೆ ಮೂಡಿ ಮಾಯವಾಯಿತು.

ಹುಡುಗಿ ಹೊರಡುತ್ತಿದ್ದಂತೆಯೇ ಶ್ರೀಮಂತಿನಿ ಪುನಃ ನುಡಿದಳು "ನೀನು ಹಿಂದುಳಿದರೆ ಕೊನೆಯಲ್ಲಿ ಗಂಜಿ ಉಳಿ ಯದೆ ಹೋಗಬಹುದು ದಿನವೂ ಮುಂದೆಯೇ ನಿಲ್ಲು."

ವಾಸುಕೀಮಣಿ ಮನೆಯಲ್ಲಿ ಗಂಜಿಯನ್ನು ಎರಡು ಬಟ್ಟ ಲಿಗೆ ಸುರಿದಾಗ ತಳದಲ್ಲಿ ಒಂದು ರೂಪಾಯಿನ ನಾಣ್ಯ ಇದ್ದು ದನ್ನು ಕಂಡಳು. ಮನಃಬುದ್ಧಿಗಳು ನಿಬ್ಬೆರಗಾದುವು. ಒಂದೆರಡು ಕ್ಷಣ ಏನು ಮಾಡಬೇಕೋ ತಿಳಿಯದೇ ಹೋಯಿತು. ಅಜ್ಜಿಗೆ ಗಂಜಿ ನೀಡಿ, ತಾನೂ ಉಂಡ ಬಳಿಕ ಆ ನಾಣ್ಯವನ್ನು ಹಿಂದಿರುಗಿಸುವುದೇ ಸರಿಯಾದ ಕ್ರಮ. ಬಹುಶಃ ಯಜಮಾನಿಗೆ ತಿಳಿಯದೆಯೇ ಪಾತ್ರೆಯಲ್ಲಿ ಬಿದ್ದಿರ ಬಹುದು ಎಂಬ ಯೋಚನೆ ಮೂಡಿತು. ಆ ನಾಣ್ಯವನ್ನು ತೆಗೆದುಕೊಂಡು ಶ್ರೀಮಂತಿನಿಯ ಮನೆಗೆ ಹೊರಟೇ ಬಿಟ್ಟಳು.

ಮನೆಯ ಕದ ಮುಚ್ಚಿತ್ತು. ಗಂಜಿಗಾಗಿ ಬಂದವ ರೆಲ್ಲಾ ಹೊರಟು ಹೋಗಿದ್ದರು. ಹೊರಗೆ ಆಳು ಕಾಳುಗಳ ಸುಳಿವೂ ಇರಲಿಲ್ಲ. ಹುಡುಗಿ ಬಾಗಿಲಲ್ಲಿ ನಿಲ್ಲಲಾರದೇ ನಿಂತಳು. ಪುನಃ ಭಿಕ್ಷೆಗಾಗಿ ಬಂದಿದ್ದಾಳೆ ಎಂದು ಯಜ ಮಾನಿ ಕೋಪಿಸಿಕೊಳ್ಳಬಹುದು ಎಂಬ ಭಯವೂ ಇಲ್ಲದಿರ

ಲಿಲ್ಲ. ಬಾಗಿಲು ತಟ್ಟಲು ಕೈಗಳು ಮುಂದಾದುವು. ಕರೆಯಲು ಬಾಯಿಯೂ ಬಾರದು. ಒಮ್ಮೆ ಹಿಂದಿರುಗಿ ಹೋಗಿ ನಾಳೆ ಗಂಜಿಗೆ ಬಂದಾಗ ಹಿಂದಿರುಗಿಸೋಣವೇ ಎಂಬ ಯೋಜನೆಯೂ ಬಂದಿತು. ಆದಕ್ಕೂ ಮನಸ್ಸು ಒಪ್ಪಲಿಲ್ಲ. ಯೋಜನೆ ಹಾಗೂ ಹೀಗೂ ಡೋಲಾಯಮಾನ. ಹುಡುಗಿ ನಿಂತಲ್ಲಿಂದ ಕದಲಲಿಲ್ಲ.

ಒಳಗಡೆ ಕಟ್ಟಿದ ನಾಯಿಗೆ ಹೊಸಬರ ವಾಸನೆ ಹತ್ತಿ ಬೊಗಳತೊಡಗಿತು.

ಸೇವಕ ಹೊರ ತಲೆಹಾಕಿ ನೋಡಿ ಗದರಿಕೊಂಡ "ಏಯ್ ! ಹುಡುಗಿ ! ಮತ್ತೇಕೆ ಬಂದೆ ? ಇನ್ನೂ ಗಂಜಿ ಇದೆ ಎಂದುಕೊಂಡೆಯಾ ? ಮತ್ತೆ ಬೇಡಲು ನಾಚಿಕೆಯಾಗುವುದಿಲ್ಲವೇ?"

ಆ ಮಾತುಗಳು ಕರ್ಕಶವಾಗಿದ್ದುವು. ಹುಡುಗಿ ಗಡಗಡ ನಡುಗಿದಳು. ಸಧ್ಯ, ಬಾಯ್ದೆರೆಯಲು ಮಾತುಗಳು ಹೊರಡಲಿಲ್ಲ. ಪಿಳಿಪಿಳಿ ನೋಡಿದುವು ಮುಗ್ಧ ಕಣ್ಣುಗಳು.

ಸೇವಕನ ಮಾತನ್ನು ಕೇಳಿಸಿಕೊಂಡ ಸ್ವಾಮಿನಿ ಹೊರ ಬಂದಳು. ನೋಡಿದರೆ ತಾನು ಯಾವ ಹುಡುಗಿಯನ್ನು ಮೆಚ್ಚಿಕೊಂಡಿದ್ದಳೋ ಅವಳೇ !

"ಏನಮ್ಮಾ....? ಏಕೆ ಬಂದೆ ?"

"ತಪ್ಪಾಯ್ತು.... ಕ್ಷಮಿಸಿ, ನಿಮಗೆ ಮತ್ತೆ ತೊಂದರೆ ಕೊಡಬೇಕಾಯ್ತು. ನೀವು ಕೊಟ್ಟ ಗಂಜಿಯಲ್ಲಿ ಒಂದು ನಾಣ್ಯವಿತ್ತು. ಇದನ್ನು ಹಿಂದಿರುಗಿಸಿ ಹೋಗೋಣವೆಂದು ಬಂದೆ."

"ಪ್ರಿಯ ಮಗುವೇ ! ನೀನು ಅದನ್ನು ಹಿಂದಿರುಗಿಸಲೆಂದು ಬಂದೆಯಾ ? ನಾನದನ್ನು ನಿನಗಾಗಿಯೇ ಗಂಜಿಯಲ್ಲಿ ಹಾಕಿದ್ದೆ. ನೀನೇ ಇಟ್ಟುಕೊ..." ಎಂದು ಒಳ್ಳೆಯ ಮಾತಾಡಿ ಅವಳಿಗೆ ತೊಟ್ಟುಕೊಳ್ಳಲು ಒಳ್ಳೆಯ ಬಟ್ಟೆಗಳನ್ನು ಕೊಟ್ಟು ತಲೆಯನ್ನು ನಲ್ಮೆಯಿಂದ ನೇವರಿಸಿ ಪರಮಾನಂದದಿಂದ ಕಳುಹಿಸಿಕೊಟ್ಟಳು.

ವಾಸುಕೀಮಣಿ ಮನೆಗೆ ಸಂತಸದಿಂದ ಹಿಂದಿರುಗಿ ವಿಷಯವನ್ನು ಅಜ್ಜಿಗೆ ವರದಿ ಮಾಡಿದಳು. ಅದಕ್ಕೆ ಆ ಅಜ್ಜಿ "ನನ್ನ ನಂತರ ನೀನು ಆ ಸ್ವಾಮಿನಿಯಲ್ಲಿಯೇ ಇದ್ದುಬಿಡು ಮಗೂ ! ದೇವರು ನಿನಗೆ ಒಳ್ಳೆಯ ದಾರಿ ತೋರಿದ್ದಾನೆ !" ಎಂದಳು.

ಕೆಲವೇ ದಿನಗಳಲ್ಲಿ ಅಜ್ಜಿ ಮರಣ ಹೊಂದಿದಳು.

ಅನಂತರ ವಾಸುಕೀಮಣಿ ಸೇರಿದ್ದು ಶ್ರೀಮಂತಿನಿಯ ಮನೆಯನ್ನೇ.

— o —

ಬನ್ನಿರೈ ಬನ್ನಿರೈ
ಓಡೋಡಿ ಬನ್ನಿರೈ
ಮುಗ್ಧ ಮನದ ಮಕ್ಕಳೆ !
ಬುದ್ಧಿ ಬಲವ ಬೆಳೆಸುವ
ಬಾಳು ಬದುಕು ನಲಿಸುವ
ತಾಯಿ ಸರಸ್ವತಿಯ ದಿವ್ಯ
ವಿದ್ಯಾ ಮಂದಿರ ಗುಡಿಗೆ
ಬನ್ನಿರೈ ಬನ್ನಿರೈ
ಓಡೋಡಿ ಬನ್ನಿರೈ

—o—

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೧) ಜೀವನಗಂಗಾ

೨) ಡಾ|| ಅಘೋರ

೩) ಡಾ|| ಕಮಲೇಶ್

೪) ವಂದೇ ಮಾತರಂ

೫) ಅನಂತಾನಂತದೆಡೆಗೆ

(ಕಥಾ ಸಂಕಲನ)

೬) ಶ್ರೀಮುಖಿ

೭) ಬಹುರತ್ನಾವಸುಂಧರಾ

೮) ರತ್ನಗರ್ಭಾವಸುಂಧರಾ

೯) ವೈಶಾಖೀ ಪರ್ವ (ಅಚ್ಚಿನಲ್ಲಿ)

೧೦) ಫಾಲ್ಗುಣೀ ಪರ್ವ

(ಕವಿತಾ ಸಂಕಲನ)

೧೧) ಪೂಜಾವಸಾನ ಸಮಯೇ....!

೧೨) ಧ್ಯಾನಾವಸಾನ ಸಮಯೇ....!

(ಪೌರಾಣಿಕ ನಾಟಕ)

೧೩) ಪುಣ್ಯಪಯೋನಿಧಿ

೧೪) ಪುಣ್ಯಾಭಿಸಾರ

(ಸಾನೆಟ್ಟುಗಳು)

೧೫) ತರಂಗಿಣಿ

(ಇವುಗಳ ಪ್ರತಿಗಳು ಮುಗಿದಿವೆ)

(ಕಥಾ ಸಂಕಲನ)

೧೬) ಸುಧಾಮಣಿ

ಎರಡನೆಯ ಮುದ್ರಣಗಳು

೧೭) ರಮಣೀಮಣಿ

೧೮) ಲಿಯೋನಾ

೧೯) ಶ್ರೀಹರ್ಷಲಾ

ಜೈ ಜ್ಞಾನಾರ್ಥಿ!

ನಿಚ್ಚಂ ಜಗದ ಸಂಕಟ ತೊಳೆಯೆ
ಸರ್ವಾಂಗೀಣ ಸಹಕಾರ ಬೆಳೆಯೆ
ಸರ್ವೋದಯ ನೇಮದಿಂದೆ–

ಕಡು ಬಡತನ–ಸಿರಿತನ–ಪರತನ
ಜಡಿಕುಟ್ಟಿ–ಅಡಿಮೇಲಾಗಿಸೆ, ಸುಜನ
ಸಮತೋಲನ ಭಾವದಿಂದೆ–

ನಿರಕ್ಷರ–ನಿರ್ವೀರ್ಯ–ನಿರಾಸಕ್ತಿ
ನಿಃಸತ್ವ–ನಿಷ್ಪ್ರಯೋಜನ–ನಿವೃತ್ತಿ
ನಿಸ್ಸಾರಗಳ ನಿರ್ನಾಮದಿಂದೆ–

ಅಂತೇವಾಸಿಗಳ ಸರ್ವೋದ್ಧಾರ!
ಸಂಜೀವನಾ ಪರಮಪಾವನಾ
ಜೈ ಜ್ಞಾನಾರ್ಥಿ! ಜೈ ಜ್ಞಾನಧನ!

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೨೦) ಮನೋನ್ಮಣಿ
೨೧) ಸಂತ್ರಾಸಿನಿ
೨೨) ಆಸೆಯ ಸುಳಿಯಲ್ಲಿ

(ಕವಿತಾ ಸಂಕಲನ)

೨೩) ಗಗನ ಕುಸುಮ
೨೪) ಜೀವನ ಕುಸುಮ
೨೫) ಕಸ್ತೂರಿ ಮಾಲಿಕಾ
೨೬) ಮಂದಾರ ಮಾಲಿಕಾ
೨೭) ಚಂಪಕ ರಾಜಿ
೨೮) ನಾದ ಬಿಂದು
೨೯) ವಿಜಯ ಗಾಥಾ
೩೦) ಗಾನತೀರ್ಥ
೩೧) ಬಕುಳ ರಾಜಿ (ಅಚ್ಚಿನಲ್ಲಿ)
೩೨) ಕಲ್ಯಾಣ ಭಾರತಿ (ಅಚ್ಚಿನಲ್ಲಿ)

(ಸಂಜೀವನ ಕಾವ್ಯ)

೩೩) ರಾಗಾನುರಾಗಿಣಿ
೩೪) ಉತ್ತರೋತ್ತರಣಿ
೩೫) ಮಂಗಳ ಭಾರತಿ

(ಗದ್ಯ ಕಾವ್ಯ)

೩೬) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೩೭) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೩೮) ದೂರ ದೇಶದಲ್ಲಿ
೩೯) ಬೆಳದಿಂಗಳ ರಾತ್ರಿ
೪೦) ವಿಶೇಷ ಸುದ್ದಿ
೪೧) ರಂಗನ ಸಾಹಸ
೪೨) ಓಹಿಯೋಜ ಸರೋವರ
೪೩) ಕೌಶಿಕನ ಗೊಂಬೆ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು-560 025